## ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998

### ಪ್ರಕರಣಗಳ ಕ್ರಮ ಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

### ಅಧ್ಯಾಯ I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಘೋಷಣೆ.

### ಅಧ್ಯಾಯ II

### ಮೈಸೂರು ಅರಮನೆಯ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ

4. ಅರಮನೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.
5. ನಿಹಿತವಾಗುವುದರ ಸಾಮಾನ್ಯ ಪರಿಣಾಮ.
6. ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರು ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಬದ್ಧರಾಗುವುದು.
7. ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ರಾಜ್ಯ ಸರ್ಕಾರದ ನಿರ್ದೇಶನ.
8. ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ನೀಡಬೇಕಾದ ಮೊಬಲಗು.
9. ಹೆಚ್ಚಿನ ಮೊಬಲಗಿನ ಸಂದಾಯ.
10. ಯುವರಾಜರಿಗೆ ಅರಮನೆಯ ಭಾಗದಲ್ಲಿ ವಾಸಿಸುವ ಹಕ್ಕು, ಇತ್ಯಾದಿ.

### ಅಧ್ಯಾಯ III

### ಅರಮನೆಯ ನಿರ್ವಹಣೆ

11. ಅರಮನೆಯ ನಿರ್ವಹಣೆ.
12. ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.
13. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.
14. ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳ ನಿರ್ವಹಣೆಯನ್ನು ನಿಯಂತ್ರಿಸುವುದು ಇತ್ಯಾದಿ.

### ಅಧ್ಯಾಯ IV

### ಹಣ ಸಂದಾಯದ ಕಮೀಷನರು

15. ಹಣ ಸಂದಾಯದ ಕಮೀಷನರ ನೇಮಕ.
16. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣಸಂದಾಯ.
17. ರಾಜ್ಯ ಸರ್ಕಾರದ ಮತ್ತು ಮಂಡಲಿಯ ಕೆಲವು ಅಧಿಕಾರಗಳು.
18. ಕ್ಲೇಮುಗಳನ್ನು ಕಮೀಷನರಿಗೆ ಮಾಡತಕ್ಕದ್ದು.

19. ಕ್ಲೇಮುಗಳ ಆದ್ಯತೆ.

20. ಕ್ಲೇಮುಗಳ ಪರಿಶೀಲನೆ.

21. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.

22. ಕಮಿಷನರಿಂದ ಮೊಬಲಗಿನ ಹಂಚಿಕೆ.

23. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.

## ಅಧ್ಯಾಯ V

## ಟ್ರಸ್ಟಿಗಳ ಮಂಡಲಿ

24. ಟ್ರಸ್ಟಿಗಳ ಮಂಡಲಿ.
25. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.
26. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.
27. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.
28. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾದ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.
29. ನಿಧಿ.
30. ಸಾಲ ಪಡೆಯಲು ಅಧಿಕಾರ.
31. ನಿಧಿಯ ಬಳಕೆ.
32. ಲೆಕ್ಕಪರಿಶೋಧನೆ.
33. ಬಜೆಟ್.

## ಅಧ್ಯಾಯ VI

## ಸಂಕೀರ್ಣ

34. ಅಧಿನಿಯಮದ ಅಧ್ಯಾರೋಹಿ ಪ್ರಭಾವ.
35. ಮಂಡಲಿಯು ಸ್ಥಿರೀಕರಿಸಿದ ಹೊರತು, ಕರಾರು ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು .
36. ಸದ್ಭಾವನೆಯಿಂದ ಕೈಗೊಂಡ ಕಾರ್ಯಕ್ಕೆ ರಕ್ಷಣೆ.
37. ದಂಡನೆಗಳು.
38. ಕಂಪನಿಗಳಿಂದ ಅಪರಾಧಗಳು.
39. ಪರಿಷ್ಕರಣೆ .
40. ಅಧಿಕಾರಗಳ ಪ್ರತ್ಯಾಯೋಜನೆ.
41. ನಿಯಮ ರಚನಾಧಿಕಾರ.
42. ತೊಂದರೆಗಳನ್ನು ನಿವಾರಿಸುವ ಅಧಿಕಾರ.
43. ಭೂ ಆರ್ಜನೆ ಅಧಿನಿಯಮ, 1894ರ ಅಡಿಯಲ್ಲಿನ ವ್ಯವಹರಣೆಗಳು ಕೊನೆಯಾಗುವುದು.

ಅನುಸೂಚಿ I

ಅನುಸೂಚಿ II

ಅನುಸೂಚಿ III

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1998ರ ಅಧಿನಿಯಮ ಸಂಖ್ಯೆ 32.**- ವಿಶೇಷವಾಗಿ ಕರ್ನಾಟಕ ರಾಜ್ಯದ ಮತ್ತು ಸಾಮಾನ್ಯವಾಗಿ ರಾಷ್ಟ್ರದ ವಿಶಿಷ್ಟ ಐತಿಹಾಸಿಕ ಹಾಗೂ ವಾಸ್ತುಶಿಲ್ಪ ಪರಂಪರೆಯ ಪ್ರತೀಕವಾದ, ಮೈಸೂರು ಅರಮನೆಯೆಂದು ಪ್ರಖ್ಯಾತವಾಗಿರುವ ಮೈಸೂರಿನಲ್ಲಿರುವ ಅರಮನೆ ಹಾಗೂ ಖಾಲಿ ಜಾಗ, ಉದ್ಯಾನ ಮತ್ತು ತೋಟವೂ ಸೇರಿದಂತೆ ಅದರ ನಿಕಟ ಪರಿಸರ, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜ ಭಂಡಾರ ಮತ್ತು ಎಲ್ಲ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳು, ಅದರ ಸಾರ್ವತ್ರಿಕ ಸ್ವರೂಪವನ್ನು ಕಾಪಾಡಿಕೊಂಡು ಬರುವ ಸಲುವಾಗಿ, ಸಾರ್ವಜನಿಕ ಉದ್ದೇಶವನ್ನು ಸಾಧಿಸುವ ದಿಸೆಯಲ್ಲಿ, ಸಾಂಸ್ಕೃತಿಕ ಪರಂಪರೆಗೆ ವಿಶ್ವಾದ್ಯಂತ ಪ್ರಖ್ಯಾತಿ ಪಡೆದಿರುವ ಕರ್ನಾಟಕದ ದಸರಾ ಉತ್ಸವದ ಕೇಂದ್ರವಾಗಿ ಮತ್ತು ವೈಭವ ಮತ್ತು ಭವ್ಯತೆಯ ಸ್ಮಾರಕವನ್ನಾಗಿ ಅದನ್ನು ಸಂರಕ್ಷಿಸುವುದಕ್ಕೆ ; ರಾಜಭಂಡಾರ, ವರ್ಣಚಿತ್ರಗಳು ಮತ್ತು ಕಲಾಕೃತಿಗಳು ಹಾಗೂ ಶಿಲ್ಪಗಳ ಅನನ್ಯ ವಸ್ತು ಸಂಗ್ರಹಾಲಯವನ್ನಾಗಿ ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಮತ್ತು ಉದ್ಯಾನ ಮತ್ತು ತೋಟವನ್ನು ಸಂರಕ್ಷಿಸುವುದಕ್ಕೆ ಹಾಗೂ ಖಾಲಿ ಜಾಗವನ್ನು ತೋಟಗಾರಿಕಾ ಉದ್ಯಾನವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕೆ ಅಗತ್ಯವಾಗಿದೆ.

ಆದ್ದರಿಂದ, ಮೈಸೂರು ಅರಮನೆಯನ್ನು ಮತ್ತು ಕಟ್ಟಡಗಳು, ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳು, ರಾಜ ಭಂಡಾರ ಮತ್ತು ಎಲ್ಲ ಇತರ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳು ಮತ್ತು ಅರಮನೆಗೆ ಸೇರಿದ ಅಥವಾ ಅರಮನೆಯಲ್ಲಿ ಇರುವ ಎಲ್ಲ ಇತರ ಚರ ಮತ್ತು ಸ್ಥಿರ ಸ್ವತ್ತುಗಳೂ ಸೇರಿದಂತೆ (1976ರಲ್ಲಿ ಸರ್ಕಾರವು ಅರಮನೆಯ ಸ್ವಾಧೀನತೆಯನ್ನು ತೆಗೆದುಕೊಂಡಾಗ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರಿಗೆ ಬಿಟ್ಟುಕೊಡಲಾದ ಚರ ಸ್ವತ್ತುಗಳನ್ನು ಹೊರತುಪಡಿಸಿ) ಸುತ್ತಮುತ್ತಲಿನ ಖಾಲಿಜಾಗವನ್ನು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅದರ ಸಂರಕ್ಷಣೆಗಾಗಿ, ನಿರ್ವಹಣೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಆರ್ಜಿಸುವುದು ಮತ್ತು ವರ್ಗಾಯಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ವಿಧೇಯಕವು ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುತ್ತದೆ.-

(1) ಮೈಸೂರು ಅರಮನೆಯನ್ನು ರಾಜ್ಯಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು ;

(2) ಹಾಗೆ ನಿಹಿತವಾಗುವುದರಿಂದ ಉಂಟಾಗುವ ಸಾಮಾನ್ಯ ಪರಿಣಾಮ ;

(3) ಅರಮನೆಯನ್ನು ಮಂಡಲಿಯಲ್ಲಿ ನಿಹಿತಗೊಳಿಸುವುದು ;

(4) ಅರಮನೆಯನ್ನು ರಾಜ್ಯಸರ್ಕಾರಕ್ಕೆ ವರ್ಗಾಯಿಸುವುದಕ್ಕಾಗಿ ಮತ್ತು ಅದರಲ್ಲಿ ನಿಹಿತಗೊಳಿಸುವುದಕ್ಕಾಗಿ ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಮೂವತ್ತೆರಡು ಕೋಟಿ ರೂಪಾಯಿಗಳ ಹಣ ಸಂದಾಯ ಮಾಡುವುದು ;

(5) ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತು ಅವರ ಪತ್ನಿಗೆ ಅವರು ಈಗ ವಾಸ ಮಾಡುತ್ತಿರುವ ಅರಮನೆಯ ಭಾಗದಲ್ಲಿ ವಾಸಿಸಲು ಅನುಮತಿ ನೀಡುವುದು ಮತ್ತು ಅರಮನೆಯಿಂದ ಹೊರಗೆ ವಾಸಿಸಲು ಇಚ್ಛೆಪಟ್ಟಲ್ಲಿ ಅವರಿಗೆ ಆ ಆಯ್ಕೆಯನ್ನು ನೀಡುವುದು, ಹಾಗೆ ಆಯ್ಕೆಮಾಡಿಕೊಂಡಲ್ಲಿ, ಅವರಿಗೆ ಮೈಸೂರು ನಗರ ಸಮುಚ್ಚಯದೊಳಗೆ ಒಂದು ಎಕರೆ ಭೂಮಿಯನ್ನು ಮತ್ತು ಒಂದು ಕೋಟಿ ರೂಪಾಯಿಗಳನ್ನು ರಾಜ್ಯಸರ್ಕಾರವು ನೀಡುವುದು ;

(6) ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯ ;

(7) ಅರಮನೆಯ ಆವರಣದೊಳಗೆ ಇರುವ ದೇವಾಲಯಗಳು ಮತ್ತು ಪೂಜಾಸ್ಥಳಗಳ ನಿರ್ವಹಣೆಯನ್ನು ನಿಯಂತ್ರಿಸುವುದು ;

(8) ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರೂ ಸೇರಿದಂತೆ ಭಕ್ತರು ದೇವಾಲಯದಲ್ಲಿ ಧಾರ್ಮಿಕ ವಿಧಿಗಳನ್ನು ಅಥವಾ ಇತರ ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳನ್ನು ನಡೆಸುವುದಕ್ಕೆ ಮತ್ತು ಅರಮನೆಯ ಆವರಣದೊಳಗೆ ಇರುವ ದೇವತೆಗಳನ್ನು ಪೂಜಿಸುವುದಕ್ಕೆ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರಿಗೆ ಇರುವ ಹಕ್ಕುಗಳು ;

(9) ಕಮೀಷನರ ನೇಮಕ ಮತ್ತು ಕಮೀಷನರಿಂದ ಕ್ಲೇಮುಗಳ ಇತ್ಯರ್ಥ ;

(10) ಅರಮನೆಯ ನಿರ್ವಹಣೆಗಾಗಿ ಟ್ರಸ್ಟಿಗಳ ಮಂಡಲಿಯ ರಚನೆ ಮತ್ತು ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ;

(11) ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ ಮತ್ತು ಅವರ ಅಧಿಕಾರಗಳು ಮತ್ತು ಕರ್ತವ್ಯಗಳು ;

(12) ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡನೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(1998ರ ವಿಧಾನ ಪರಿಷತ್ತು ವಿಧೇಯಕ ಸಂಖ್ಯೆ 1 ರಿಂದ ತೆಗೆದುಕೊಳ್ಳಲಾಗಿದೆ)

1998 ರ ಕರ್ನಾಟಕ ಅಧಿನಿಯಮ ಸಂಖ್ಯೆ 32

(1998ರ ನವೆಂಬರ್ 30 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

I

**2013ರ ತಿದ್ದುಪಡಿ ಅಧಿನಿಯಮ ಸಂಖ್ಯೆ 34.–** ಅರಮನೆಯ ಆಡಳಿತ ಮತ್ತು ನಿರ್ವಹಣೆಯ ಟ್ರಸ್ಟಿಗಳ ಮಂಡಳಿಯಲ್ಲಿ ಸದಸ್ಯರಾಗಿರುವ "ಪ್ರಾಚ್ಯವಸ್ತು ನಿರ್ದೇಶಕರ" ಸ್ಥಾನದಲ್ಲಿ "ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರು" ಇವರನ್ನು ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಉಪಬಂಧ ಕಲ್ಪಿಸಲು ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:2, ಕಡತ ಸಂಖ್ಯೆ:ಸಂವ್ಯಶಾಇ 64 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 42ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

# ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998

(1998ರ ಆಗಸ್ಟ್ 28 ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

**ಮೈಸೂರು ಅರಮನೆ ಮತ್ತು ಅದರ ಸುತ್ತಮುತ್ತಲಿನ ಖಾಲಿ ಜಾಗವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ, ವರ್ಗಾವಣೆ ಮಾಡುವುದಕ್ಕೆ ಮತ್ತು ಅದರ ಸಂರಕ್ಷಣೆಗೆ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.**

[2013ರ ಅಧಿನಿಯಮ 34ರಲ್ಲಿ ತಿದ್ದುಪಡಿಯಾದಂತೆ)

ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ವಿಶೇಷವಾಗಿ ಕರ್ನಾಟಕ ರಾಜ್ಯದ ಮತ್ತು ಸಾಮಾನ್ಯವಾಗಿ ರಾಷ್ಟ್ರದ ವಿಶಿಷ್ಟ ಐತಿಹಾಸಿಕ ಹಾಗೂ ವಾಸ್ತುಶಿಲ್ಪ ಪರಂಪರೆಯ ಪ್ರತೀಕವಾದ, ಮೈಸೂರು ಅರಮನೆಯೆಂದು ಪ್ರಖ್ಯಾತವಾಗಿರುವ ಮೈಸೂರಿನಲ್ಲಿರುವ ಅರಮನೆ ಹಾಗೂ ಖಾಲಿ ಜಾಗ, ಉದ್ಯಾನ ಮತ್ತು ತೋಟವೂ ಸೇರಿದಂತೆ ಅದರ ನಿಕಟ ಪರಿಸರ, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜ ಭಂಡಾರ ಮತ್ತು ಎಲ್ಲ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳು, ಅದರ ಸಾರ್ವತ್ರಿಕ ಸ್ವರೂಪವನ್ನು ಕಾಪಾಡಿಕೊಂಡು ಬರುವ ಸಲುವಾಗಿ, ಸಾರ್ವಜನಿಕ ಉದ್ದೇಶವನ್ನು ಸಾಧಿಸುವ ದಿಸೆಯಲ್ಲಿ, ಸಾಂಸ್ಕೃತಿಕ ಪರಂಪರೆಗೆ ವಿಶ್ವಾದ್ಯಂತ ಪ್ರಖ್ಯಾತಿ ಪಡೆದಿರುವ ಕರ್ನಾಟಕದ ದಸರಾ ಉತ್ಸವದ ಕೇಂದ್ರವಾಗಿ ಮತ್ತು ವೈಭವ ಮತ್ತು ಭವ್ಯತೆಯ ಸ್ಮಾರಕವನ್ನಾಗಿ ಅದನ್ನು ಸಂರಕ್ಷಿಸುವುದಕ್ಕೆ, ರಾಜ ಭಂಡಾರ, ವರ್ಣಚಿತ್ರಗಳು ಮತ್ತು ಕಲಾ ಕೃತಿಗಳು ಹಾಗೂ ಶಿಲ್ಪಗಳ ಅನನ್ಯ ವಸ್ತು ಸಂಗ್ರಹಾಲಯವನ್ನಾಗಿ ಅದನ್ನು ಅಭಿವೃದ್ಧಿಗೊಳಿಸುವುದಕ್ಕೆ ಮತ್ತು ಉದ್ಯಾನ ಮತ್ತು ತೋಟವನ್ನು ಸಂರಕ್ಷಿಸುವುದಕ್ಕೆ ಹಾಗೂ ಖಾಲಿ ಜಾಗವನ್ನು ತೋಟಗಾರಿಕಾ ಉದ್ಯಾನವನ್ನಾಗಿ ಅಭಿವೃದ್ಧಿಗೊಳಿಸುವುದಕ್ಕೆ ಅಗತ್ಯವಾಗಿರುವುದರಿಂದ ಮತ್ತು ಆ ಕಾರಣಕ್ಕಾಗಿ ಇದನ್ನು ಕಾನೂನುಬದ್ಧವಾಗಿ ಆರ್ಜಿಸಲು ಮತ್ತು ವರ್ಗಾವಣೆ ಮಾಡಲು ಉಪಬಂಧ ಕಲ್ಪಿಸಬೇಕಾಗಿರುವುದರಿಂದ;

ನಗರ ಭೂ (ಮಿತಿ ಮತ್ತು ನಿಯಂತ್ರಣ) ಅಧಿನಿಯಮ, 1976ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮೈಸೂರು ಅರಮನೆ ಮತ್ತು ಅದರ ಸುತ್ತಮುತ್ತಲಿನ ಭೂಮಿಯು ಸದರಿ ಅಧಿನಿಯಮದ ವ್ಯಾಪ್ತಿಯೊಳಗೆ ಬರುವುದೆಂದು ತೀರ್ಮಾನ ನೀಡಿದ್ದು, ಮೈಸೂರು ಅರಮನೆಯ ಸುತ್ತಮುತ್ತಲಿನ ಭೂಮಿಯ ಗಣನೀಯ ಭಾಗವು ಹೆಚ್ಚುವರಿ ಭೂಮಿಯಾಗಿರುವುದರಿಂದ ಅದನ್ನು ರಾಜ್ಯ ಸರ್ಕಾರದ ಸ್ವಾಧೀನಕ್ಕೆ ಒಪ್ಪಿಸಬೇಕೆಂದು ಘೋಷಿಸಿ ಆದೇಶ ಹೊರಡಿಸಿರುವುದರಿಂದ ಮತ್ತು ಕರ್ನಾಟಕ ಅಪೀಲು ವಿಚಾರಣಾ ನ್ಯಾಯಾಧಿಕರಣಕ್ಕೆ ಮಾಡಲಾದ ಅಪೀಲಿನ ಸಂಬಂಧದಲ್ಲಿ ನ್ಯಾಯಾಧಿಕರಣವು ಸದರಿ ಆದೇಶವನ್ನು ಎತ್ತಿ ಹಿಡಿದಿರುವುದರಿಂದ;

ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರು ಸಲ್ಲಿಸಿರುವ ಕೆಲವು ರಿಟ್ ಅರ್ಜಿಗಳಲ್ಲಿ ಅಪೀಲು ವಿಚಾರಣಾ ಪ್ರಾಧಿಕಾರದ ಆಜ್ಞೆಯ ನ್ಯಾಯಸಮ್ಮತತೆಯನ್ನು ಪ್ರಶ್ನಿಸಿದ್ದು ಈ ರಿಟ್ ಅರ್ಜಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಉಳಿದಿರುವುದರಿಂದ;

ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರು ದಿನಾಂಕ 18-8-75, 3-9-75, 7-2-76 ಮತ್ತು 10-2-76ರ ತಮ್ಮ ಪತ್ರಗಳಲ್ಲಿ, ತಾವು ವಾಸಿಸುತ್ತಿರುವ ಅರಮನೆಯ ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಸ್ವಾಧೀನಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರವನ್ನು ಕೋರಿದ್ದರಿಂದ ಮತ್ತು ರಾಜ್ಯ ಸರ್ಕಾರವು ತದನುಸಾರವಾಗಿ ದಿನಾಂಕ 26-2-76ರ ಸರ್ಕಾರಿ ಆದೇಶ ಸಂಖ್ಯೆ ಜಿಎಡಿ 2 ಪಿಎಸ್‌ಆರ್ 76ನ್ನು ಹೊರಡಿಸುವ ಮೂಲಕ ಮೈಸೂರು ಅರಮನೆಯ ಭಾಗವನ್ನು ಚರ ಆಸ್ತಿಗಳೊಂದಿಗೆ ಸ್ವಾಧೀನಪಡಿಸಿಕೊಂಡಿದ್ದು ಆ ತರುವಾಯ ಸಾರ್ವತ್ರಿಕ ಸ್ಮಾರಕವಾಗಿ ಅರಮನೆಯನ್ನು ನಿರ್ವಹಿಸುವುದಕ್ಕೆ ಮತ್ತು ಅದರ ಸಾರ್ವತ್ರಿಕ ಸ್ವರೂಪವನ್ನು ಕಾಪಾಡಿಕೊಂಡು ಬರುವುದಕ್ಕೆ ಗಣನೀಯವಾಗಿ ಹಣ ವೆಚ್ಚ ಮಾಡಿದ್ದರಿಂದ, ಅಲ್ಲದೆ ಮೈಸೂರು ಅರಮನೆಯನ್ನು ಮತ್ತು ರಾಜ ಭಂಡಾರ, ಆಭರಣಗಳು ಮತ್ತು ಇತರ ವಸ್ತುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ನಿರ್ವಹಿಸಬೇಕೆಂಬುದು ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಅವರ ಇಂಗಿತವೂ ಆಗಿದ್ದರಿಂದ ಹಾಗೂ ವಾರಸುದಾರರ ಪೈಕಿ ಒಬ್ಬರು ರಾಜ್ಯ ಸರ್ಕಾರದ ಆದೇಶದ

ಕಾನೂನುಸಮ್ಮತತೆಯನ್ನು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ್ದು ಕರ್ನಾಟಕ ಉಚ್ಚ ನ್ಯಾಯಾಲಯವು ಆ ರಿಟ್ ಅರ್ಜಿಯನ್ನು ಅಂಗೀಕರಿಸಿದ್ದರಿಂದ ಮತ್ತು ರಾಜ್ಯ ಸರ್ಕಾರವು ಅದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಅಪೀಲನ್ನು 1998ರ ಏಪ್ರಿಲ್ 21ನೇ ದಿನಾಂಕದಂದು ವಜಾ ಮಾಡಲಾದುದರಿಂದ;

ಭೂ ಆರ್ಜನಾ ಅಧಿನಿಯಮ, 1894ರ 4ನೇ ಪ್ರಕರಣದ ಅಡಿಯಲ್ಲಿ ಅರಮನೆಯ ಸುತ್ತಮುತ್ತಲಿನ ಭೂಮಿಯ ಆರ್ಜನೆಗಾಗಿ ದಿನಾಂಕ 1-7-1986ರ ಸಂಖ್ಯೆ : ಎಲ್‌ಎಕ್ಯೂ/ಎಸ್‌ಆರ್/51/86 -87ರ ಅಡಿಯಲ್ಲಿ ಪ್ರಾರಂಭಿಕ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರ ಪೈಕಿ ಕೆಲವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸುವ ಮೂಲಕ ಅವುಗಳನ್ನು ಪ್ರಶ್ನಿಸಿದ್ದರಿಂದ ಮತ್ತು ಉಚ್ಚ ನ್ಯಾಯಾಲಯವು ಎಲ್ಲ ವ್ಯವಹರಣೆಗಳನ್ನು ತಡೆಹಿಡಿದಿದ್ದುದರಿಂದ ಮತ್ತು ಈಗ ಈ ರಿಟ್ ಅರ್ಜಿಗಳನ್ನು ಹಿಂತೆಗೆದುಕೊಳ್ಳಲಾಗಿರುವುದರಿಂದ ;

ಇದರಲ್ಲಿ ಈ ಮೊದಲು ಹೇಳಿದ ಉದ್ದೇಶಕ್ಕಾಗಿ ಮೈಸೂರು ಅರಮನೆ ಹಾಗೂ ಅದರ ಸುತ್ತಲಿನ ಉದ್ಯಾನ, ತೋಟ ಮತ್ತು ಖಾಲಿ ಜಾಗ, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜ ಭಂಡಾರ ಮತ್ತು ಅರಮನೆಗೆ ಸೇರಿದ ಅಥವಾ ಅರಮನೆಯಲ್ಲಿ ಇರುವ ಇತರ ಎಲ್ಲ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣ ಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳನ್ನು ಭೂ ಆರ್ಜನೆ ಅಧಿನಿಯಮ, 1894ರ ಉಪಬಂಧಗಳಿಗೆ ಭಿನ್ನವಾದ ಸೂಕ್ತ ಕಾನೂನಿನ ಮೂಲಕ ಆರ್ಜಿಸುವುದಕ್ಕೆ ಮತ್ತು ವರ್ಗಾವಣೆ ಮಾಡುವುದಕ್ಕೆ ಉಪಬಂಧ ಕಲ್ಪಿಸುವುದು ಮತ್ತು ನಗರ ಭೂ (ಮಿತಿ ಮತ್ತು ನಿಯಂತ್ರಣ) ಅಧಿನಿಯಮ, 1976ರ ಅಡಿಯಲ್ಲಿ ಹೊರಡಿಸಲಾದ ಆದೇಶಗಳನ್ನು ಪ್ರಶ್ನಿಸಲಾಗಿರುವ ಮೇಲೆ ಹೇಳಿದ ರಿಟ್ ಅರ್ಜಿಗಳ ಬಗೆಗಿನ ಅಂತಿಮ ನಿರ್ಣಯವನ್ನು ಗಮನದಲ್ಲಿಟ್ಟುಕೊಂಡು ಸಂಪೂರ್ಣ ಭೂಹಿಡುವಳಿಯ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ನಿರ್ಧರಿಸುವುದಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ನಲವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ 1[ದಿನಾಂಕದಂದು]1 ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಅಧಿನಿಯಮವು ಅಧಿಸೂಚನೆ ಮೂಲಕ ದಿನಾಂಕ: 30.11.1998 ರಿಂದ ಜಾರಿಗೆ ಬಂದಿದೆ.

**2. ಪರಿಭಾಷೆ.**- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು, -

(1) "ಗೊತ್ತುಪಡಿಸಿದ ದಿನಾಂಕ" ಎಂದರೆ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿ ಗೊತ್ತುಪಡಿಸಲಾದ ದಿನಾಂಕ ;

(2) "ಮೈಸೂರು ಅರಮನೆ" ಎಂದರೆ ಮೈಸೂರು ಅರಮನೆ ಮತ್ತು ಅನುಸೂಚಿ ಖ ರಲ್ಲಿ ಸಂಪೂರ್ಣವಾಗಿ ವಿವರಿಸಿರುವ ಅದರ ಸುತ್ತಮುತ್ತಲಿನ ಖಾಲಿ ಜಾಗ; ಇದರಲ್ಲಿ ಕಟ್ಟಡಗಳು, ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳು, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜ ಭಂಡಾರ ಮತ್ತು ಎಲ್ಲಾ ಇತರ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಪೀಠೋಪಕರಣಗಳು ಮತ್ತು ಕರ್ನಾಟಕ ಸರ್ಕಾರದ ಸರ್ಕಾರಿ ಆದೇಶ ಸಂಖ್ಯೆ : ಜಿಎಡಿ 2 ಪಿಎಸ್‌ಆರ್ 76, ದಿನಾಂಕ 26-2-76ರ ಅನುಸರಣೆಯಲ್ಲಿ, ವಸ್ತುಗಳ ಪ್ರಭಾರವನ್ನು ವರ್ಗಾಯಿಸುವಾಗ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರಿಗೆ ಬಿಟ್ಟುಕೊಟ್ಟಿರುವ ಚರ ಸ್ವತ್ತುಗಳನ್ನು ಹೊರತುಪಡಿಸಿದಂತೆ

ಅರಮನೆಗೆ ಸೇರಿದ ಅಥವಾ ಅರಮನೆಯಲ್ಲಿರುವ ಎಲ್ಲ ಇತರ ಚರ ಅಥವಾ ಸ್ಥಿರ ಸ್ವತ್ತುಗಳು ಸೇರುತ್ತವೆ ;

(3) "ಮಂಡಲಿ" ಎಂದರೆ 24ನೇ ಪ್ರಕರಣದ ಅಡಿ ರಚಿಸಲಾದ ಟ್ರಸ್ಟಿಗಳ ಮಂಡಲಿ ;

(4) "ಕಮೀಷನರ್" ಎಂದರೆ 15ನೇ ಪ್ರಕರಣದ ಅಡಿ ನೇಮಕ ಮಾಡಲಾದ ಹಣ ಸಂದಾಯದ ಕಮೀಷನರ್;

(5) "ಕಾನೂನುಸಮ್ಮತ ಪ್ರತಿನಿಧಿಗಳು" ಮತ್ತು "ವಾರಸುದಾರರು" ಎಂದರೆ ಕ್ರಮವಾಗಿ ಹಿಂದಿನ ಮೈಸೂರು ಮಹಾರಾಜರಾದ ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರು ; ಇದರಲ್ಲಿ ಅವರ ಹಿತಾಸಕ್ತಿಯ ಉತ್ತರಾಧಿಕಾರಿಗಳೂ ಒಳಗೊಳ್ಳುತ್ತಾರೆ ;

(6) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(7) "ನಿರ್ದಿಷ್ಟಪಡಿಸಿದ ದಿನಾಂಕ" ಎಂದರೆ ರಾಜ್ಯ ಸರ್ಕಾರವು ಈ ಅಧಿನಿಯಮದ ಯಾವುದೇ ಉಪಬಂಧದ ಉದ್ದೇಶಕ್ಕಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕ ;

(8) "ವರ್ಗಾವಣೆ ಪಡೆದವನು" ಎಂದರೆ ಅರಮನೆಗೆ ಸಂಬಂಧಿಸಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು 1998ರ ಏಪ್ರಿಲ್ ಇಪ್ಪತ್ತೊಂದನೇ ದಿನಾಂಕದಂದು ಅಥವಾ ತರುವಾಯ ಮಾರಾಟ, ಕೊಡುಗೆ, ಅಡಮಾನ, ಗುತ್ತಿಗೆ ಅಥವಾ ಅನ್ಯರೀತಿಯ ಮೂಲಕ ಯಾವ ವ್ಯಕ್ತಿಗೆ ಪರಭಾರೆ ಮಾಡಲಾಗುವುದೋ ಆ ವ್ಯಕ್ತಿ ;

(9) "ವರ್ಷ" ಎಂದರೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರಾರಂಭವಾಗುವ ವರ್ಷ.

3. **ಘೋಷಣೆ.-** ಭಾರತ ಸಂವಿಧಾನದ 31ಸಿ ಅನುಚ್ಛೇದದ ಅನುಸರಣೆಯಲ್ಲಿ, ಭಾರತ ಸಂವಿಧಾನದ 39ನೇ ಅನುಚ್ಛೇದದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ತತ್ವಗಳನ್ನು ಪಾಲಿಸುವ ಬಗ್ಗೆ ರಾಜ್ಯದ ಕಾರ್ಯನೀತಿಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಈ ಅಧಿನಿಯಮದ ಉಪಬಂಧಗಳನ್ನು ಅಧಿನಿಯಮಿತಿಗೊಳಿಸಲಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ II

## ಮೈಸೂರು ಅರಮನೆಯ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ

4. **ಅರಮನೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.-** ಗೊತ್ತುಪಡಿಸಿದ ದಿನಾಂಕದಂದು ಮೈಸೂರು ಅರಮನೆ ( ಇಲ್ಲಿ ಇನ್ನು ಮುಂದೆ "ಅರಮನೆ" ಎಂದು ಉಲ್ಲೇಖಿಸಲಾಗುವುದು) ಮತ್ತು ಅರಮನೆಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಮತ್ತು ವರ್ಗಾವಣೆ ಪಡೆದಿರುವವರು ಹೊಂದಿರುವ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಈ ಅಧಿನಿಯಮದ ಕಾರಣದಿಂದಾಗಿ ರಾಜ್ಯ ಸರ್ಕಾರಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಸಂಪೂರ್ಣವಾಗಿ ಅದರಲ್ಲಿ ನಿಹಿತವಾಗತಕ್ಕದ್ದು.

5. **ನಿಹಿತವಾಗುವುದರ ಸಾಮಾನ್ಯ ಪರಿಣಾಮ.-** (1) ಅರಮನೆಯಲ್ಲಿ , ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಒಡೆತನ, ಸ್ವಾಧೀನ, ಅಧಿಕಾರ ಅಥವಾ ನಿಯಂತ್ರಣದಲ್ಲಿದ್ದ ಎಲ್ಲ ಆಸ್ತಿಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಕಟ್ಟಡಗಳು, ದೇವಾಲಯಗಳು, ಪೂಜಾ ಸ್ಥಳಗಳು, ಖಾಲಿ ಜಾಗ, ಉದ್ಯಾನ ಮತ್ತು ತೋಟ ಮತ್ತು ಇತರ ಎಲ್ಲಾ ಕಲಾಕೃತಿಗಳು, ರಾಜ ಲಾಂಛನಗಳು, ರಾಜ ಸಿಂಹಾಸನಗಳು, ರಾಜ ಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಮತ್ತು ಆಭರಣಗಳೂ ಸೇರಿದಂತೆ ರಾಜಭಂಡಾರ ಮತ್ತು ವರ್ಣ ಚಿತ್ರಗಳು, ಕಲಾಕೃತಿಗಳು, ಶಿಲ್ಪಗಳು ಸೇರಿದಂತೆ ಎಲ್ಲ ಚರ ಮತ್ತು ಸ್ಥಿರಸ್ವತ್ತುಗಳು ಮತ್ತು ಅಂಥ ಆಸ್ತಿಯಲ್ಲಿನ ಅಥವಾ ಅದರಿಂದ ಉಂಟಾಗುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ಇತರ ದಸ್ತಾವೇಜುಗಳನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

(2) 4ನೇ ಪ್ರಕರಣದ ಅಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ, ಮೇಲೆ ಹೇಳಲಾದ ಎಲ್ಲ ಸ್ವತ್ತುಗಳನ್ನು, ಹಾಗೆ ಸರ್ಕಾರದಲ್ಲಿ ನಿಹಿತಗೊಂಡ ಕಾರಣದಿಂದಾಗಿ ಯಾವುದೇ ಟ್ರಸ್ಟ್, ಬಾಧ್ಯತೆ, ಅಡಮಾನ, ಗುತ್ತಿಗೆ, ಪ್ರಭಾರ, ಧಾರಣಾಧಿಕಾರ ಮತ್ತು ಅವುಗಳಿಗೆ ಬಾಧಕವಾಗುವ ಎಲ್ಲ ಇತರ ಋಣಭಾರಗಳಿಂದ ಮುಕ್ತಗೊಳಿಸತಕ್ಕದ್ದು ಮತ್ತು ವಿಮೋಚನೆಗೊಳಿಸತಕ್ಕದ್ದು ಮತ್ತು ಅಂಥ ಸ್ವತ್ತಿನ ಬಳಕೆಯನ್ನು ಯಾವುದೇ ರೀತಿಯಲ್ಲಿ ನಿರ್ಬಂಧಪಡಿಸುವ ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಯಾವುದೇ ಜಪ್ತಿ, ನಿಷೇದಾಜ್ಞೆ, ತೀರ್ಪು, ಡಿಕ್ರಿ ಅಥವಾ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(3) ಅರಮನೆಯ ಸಂಬಂಧದಲ್ಲಿ ಗೊತ್ತುಪಡಿಸಿದ ದಿನಾಂಕದಂದು ಯಾವುದೇ ಹಕ್ಕು, ಹಕ್ಕುಮೂಲ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ಕಾನೂನುಸಮ್ಮತ ಪ್ರತಿನಿಧಿ ಅಥವಾ ವಾರಸುದಾರನು ಅಥವಾ ವರ್ಗಾವಣೆ ಪಡೆದವನು 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನಿಂದ ಹಣ ಪಡೆಯಲು ನಿಯಮಿಸಲಾದ ರೀತಿಯಲ್ಲಿ ಕಮೀಷನರಿಗೆ ಕ್ಲೇಮು ಸಲ್ಲಿಸಲು ಹಕ್ಕು ಹೊಂದಿದವನಾಗಿರತಕ್ಕದ್ದು.

(4) ಈ ಅಧಿನಿಯಮದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ಪ್ರತಿಯೊಬ್ಬ ಅಡಮಾನದಾರನು ಮತ್ತು ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಅಂಥ ಅಡಮಾನ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯ ಬಗ್ಗೆ ಕಮೀಷನರಿಗೆ ಮಾಹಿತಿಯನ್ನು ಕೊಡತಕ್ಕದ್ದು.

(5) ಸಂದೇಹಗಳ ನಿವಾರಣೆಗಾಗಿ, (4)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ವತ್ತಿನ ಅಡಮಾನದಾರನು ಅಥವಾ ಅಂಥ ಯಾವುದೇ ಸ್ವತ್ತಿನಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಇತರ ಯಾವೊಬ್ಬ ವ್ಯಕ್ತಿಯು ತನ್ನ ಹಕ್ಕುಗಳು ಮತ್ತು ಹಿತಾಸಕ್ತಿಗೆ ಅನುಸಾರವಾಗಿ 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ಪೈಕಿ ಪೂರ್ಣ ಅಥವಾ ಭಾಗಶಃ ಅಡಮಾನದ ಹಣ ಅಥವಾ ಇತರ ಬಾಕಿಗಳನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ. ಆದರೆ ಅಂಥ ಯಾವುದೇ ಅಡಮಾನ, ಗುತ್ತಿಗೆ, ಪ್ರಭಾರ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

(6) ಗೊತ್ತುಪಡಿಸಿದ ದಿನಾಂಕದಂದು 4ನೇ ಪ್ರಕರಣದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರು ಹೂಡಿದ ಅಥವಾ ಸಲ್ಲಿಸಿದ ಅಥವಾ ಅವರ ವಿರುದ್ಧ ಹೂಡಲಾದ ಅಥವಾ ಸಲ್ಲಿಸಲಾದ ಯಾವುದೇ ದಾವೆ, ಅಪೀಲು ಅಥವಾ ವ್ಯವಹರಣೆಯು ಇತ್ಯರ್ಥವಾಗದೆ ಉಳಿದಿದ್ದರೆ, ಅದು ಅರಮನೆಯ ವರ್ಗಾವಣೆಯ ಕಾರಣದಿಂದಾಗಿ ಅಥವಾ ಈ ಅಧಿನಿಯಮದಲ್ಲಿರುವ ಯಾವುವೇ ಉಪಬಂಧಗಳ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ನಿಂತುಹೋಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲ ಪ್ರಭಾವ ಬೀರತಕ್ಕದ್ದಲ್ಲ. ಆದರೆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ರಾಜ್ಯ ಸರ್ಕಾರವು ಅಥವಾ ಅದರ ವಿರುದ್ಧ ಅಥವಾ ಅರಮನೆಯು ಮಂಡಲಿಯಲ್ಲಿ ನಿಹಿತವಾಗತಕ್ಕದ್ದೆಂದು 7ನೇ ಪ್ರಕರಣದಡಿ ನಿರ್ದೇಶಿತವಾಗಿದ್ದರೆ ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

**6. ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರು ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಬದ್ಧರಾಗುವುದು.-** (1) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಪಟ್ಟಂತೆ ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಪ್ರತಿಯೊಂದು ಹೊಣೆಗಾರಿಕೆಯು ಸಂದರ್ಭಾನುಸಾರವಾಗಿ ಅಂಥ ಕಾನೂನು ಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಹೊಣೆಗಾರಿಕೆಯಾಗಿರತಕ್ಕದ್ದು ಮತ್ತು ಅವರ ವಿರುದ್ಧ ಜಾರಿಗೊಳಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದ ವಿರುದ್ಧವಾಗಿ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಅರಮನೆಯನ್ನು ಮಂಡಲಿಯಲ್ಲಿ ನಿಹಿತಗೊಳಿಸಲು ನಿರ್ದೇಶಿಸಲಾಗಿದ್ದಲ್ಲಿ, ಮಂಡಲಿಯ ವಿರುದ್ಧವಾಗಿ ಜಾರಿಗೊಳಿಸತಕ್ಕದ್ದಲ್ಲ.

(2) ಸಂದೇಹಗಳ ನಿವಾರಣೆಗಾಗಿ ಈ ಮುಂದಿನಂತೆ ಘೋಷಿಸಲಾಗಿದೆ,-

(ಎ) ಈ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಪ್ರಕರಣದಲ್ಲಿ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ಅವಧಿಯ ಸಂಬಂಧದಲ್ಲಿ ಅರಮನೆಗೆ ಸಂಬಂಧಪಟ್ಟ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಯಾವ ಹೊಣೆಗಾರಿಕೆಯನ್ನೂ ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿಯಲ್ಲಿ, ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ .

(ಬಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಉದ್ಭವಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅರಮನೆಗೆ ಸಂಬಂಧಪಟ್ಟ ಯಾವುದೇ ಕ್ಲೇಮು ಅಥವಾ ವಿವಾದದ ಬಗ್ಗೆ ಆ ದಿನಾಂಕದ ತರುವಾಯ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ನೀಡುವ ಯಾವುದೇ ಐತೀರ್ಪು, ಡಿಕ್ರಿ ಅಥವಾ ಇತರ ಆಜ್ಞೆಯನ್ನು ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿ ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

(ಸಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರು ಹೊಂದಿದ್ದ ಯಾವುದೇ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

7. **ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ರಾಜ್ಯ ಸರ್ಕಾರದ ನಿರ್ದೇಶನ.**- (1) 4 ಮತ್ತು 5ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿದ್ದ ಅರಮನೆಯು ರಾಜ್ಯ ಸರ್ಕಾರದಲ್ಲಿಯೇ ನಿಹಿತವಾಗಿರುವುದು ಮುಂದುವರೆಯುವುದಕ್ಕೆ ಬದಲಾಗಿ, ಅಧಿಸೂಚನೆಯ ದಿನಾಂಕದಂದು ಅಥವಾ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮುಂಚಿನ ದಿನಾಂಕದಂದು (ಗೊತ್ತುಪಡಿಸಿದ ದಿನಾಂಕಕ್ಕಿಂತ ಮುಂಚಿನ ದಿನಾಂಕವಲ್ಲದ) ತಾನು ವಿಧಿಸಲು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂಬುದಾಗಿ ನಿರ್ದೇಶಿಸತಕ್ಕದ್ದು.

(2) (1)ನೇ ಉಪಪ್ರಕರಣದಡಿಯಲ್ಲಿ ಅರಮನೆಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಮಂಡಲಿಯಲ್ಲಿ ನಿಹಿತಗೊಂಡಿರುವಲ್ಲಿ, ಹಾಗೆ ನಿಹಿತವಾದ ದಿನಾಂಕದಂದು ಮತ್ತು ಅಂದಿನಿಂದ ಮಂಡಲಿಯು ಅಂಥ ಅರಮನೆಗೆ ಸಂಬಂಧಿಸಿದಂತೆ ಮಾಲೀಕನಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದಡಿಯಲ್ಲಿ ರಾಜ್ಯ ಸರ್ಕಾರವು ಹೊಂದಿದ್ದ ಎಲ್ಲ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಹಾಗೆ ನಿಹಿತಗೊಂಡ ದಿನಾಂಕದಂದು ಮತ್ತು ದಿನಾಂಕದಿಂದ ಮಂಡಲಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳಾಗಿವೆಯೆಂದು ಭಾವಿಸತಕ್ಕದ್ದು.

8. **ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ನೀಡಬೇಕಾದ ಮೊಬಲಗು.**- 4ನೇ ಪ್ರಕರಣದ ಅಡಿಯಲ್ಲಿ ಅರಮನೆಯನ್ನು ಮತ್ತು ಅರಮನೆಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿ ಅದರಲ್ಲಿ ನಿಹಿತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಮೂವತ್ತೆರಡು ಕೋಟಿ ರೂಪಾಯಿಯನ್ನು ಕಮೀಷನರ ಹೆಸರಿನಲ್ಲಿ ಠೇವಣಿ ಇಡುವ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು ೫ಗನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅದಕ್ಕೆ ಹಕ್ಕು ಹೊಂದಿರುವ ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಸಂದಾಯ ಮಾಡತಕ್ಕದ್ದು.

9. **ಹೆಚ್ಚಿನ ಮೊಬಲಗಿನ ಸಂದಾಯ.**- (1) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿಗೆ, ಗೊತ್ತುಪಡಿಸಿದ ದಿನಾಂಕದಂದು ಪ್ರಾರಂಭವಾಗಿ ರಾಜ್ಯ ಸರ್ಕಾರವು ಕಮೀಷನರಿಗೆ ಆ ಮೊಬಲಗನ್ನು ಸಂದಾಯ ಮಾಡುವ ದಿನಾಂಕದಂದು ಮುಕ್ತಾಯವಾಗುವ ಅವಧಿಗೆ ವರ್ಷಕ್ಕೆ ಶೇಕಡಾ ನಾಲ್ಕರ ದರದಲ್ಲಿ ಸರಳಬಡ್ಡಿಯನ್ನು ನೀಡತಕ್ಕದ್ದು.

(2) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊಬಲಗಿನ ಜೊತೆಗೆ (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸಲಾದ ಮೊಬಲಗನ್ನು ರಾಜ್ಯ ಸರ್ಕಾರವು ಸಂದರ್ಭಾನುಸಾರ ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ನೀಡತಕ್ಕದ್ದು.

(3) ಸಂದೇಹಗಳ ನಿವಾರಣೆಗಾಗಿ, 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ, ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಹೊಣೆಗಾರಿಕೆಯನ್ನು 8ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಮೊಬಲಗಿನಿಂದ ಮತ್ತು (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗುಗಳಿಂದಲೂ ಸಹ ಸಂದರ್ಭಾನುಸಾರ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಸಾಲಗಾರರ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗನುಸಾರವಾಗಿ ತೀರಿಕೆ ಮಾಡತಕ್ಕದ್ದು.

**10. ಯುವರಾಜರಿಗೆ ಅರಮನೆಯ ಭಾಗದಲ್ಲಿ ವಾಸಿಸುವ ಹಕ್ಕು, ಇತ್ಯಾದಿ.-** ಈ ಅಧಿನಿಯಮದಲ್ಲಿ, ಏನೇ ಇದ್ದರೂ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಇಲ್ಲಿ ಇನ್ನು ಮುಂದೆ ಯುವರಾಜ ಎಂದು ಉಲ್ಲೇಖಿಸಲಾಗುವುದು) ಮತ್ತು ಅವರ ಪತ್ನಿಗೆ ಅವರು ಬದುಕಿರುವವರೆಗೆ ಅನುಸೂಚಿ ಖಖರಲ್ಲಿ ನಿರ್ದಿಷ್ಟಪಡಿಸಿರುವ ಅರಮನೆಯ ಭಾಗದಲ್ಲಿ ವಾಸಿಸುವುದನ್ನು ಮುಂದುವರೆಸಲು ಅನುಮತಿ ನೀಡತಕ್ಕದ್ದು :

ಪರಂತು, ಗೊತ್ತುಪಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಯುವರಾಜ ಮತ್ತು ಅವರ ಪತ್ನಿ ಅರಮನೆಯ ಭಾಗವನ್ನು ಖಾಲಿ ಮಾಡಲು ಮತ್ತು ಅರಮನೆಯ ಹೊರಗೆ ವಾಸಿಸಲು ಇಚ್ಛಿಪಟ್ಟರೆ ಮತ್ತು ಅಂಥ ಇಚ್ಛೆಯನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿದರೆ, ರಾಜ್ಯ ಸರ್ಕಾರವು ಅಂಥ ಮಾಹಿತಿ ತಲುಪಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಯುವರಾಜ ಮತ್ತು ಅವರ ಪತ್ನಿಗೆ ಮೈಸೂರು ನಗರ ಸಮುಚ್ಚಯದೊಳಗೆ ಒಂದು ಎಕರೆ ಭೂಮಿಯನ್ನು ಮತ್ತು ಅವರು ವಾಸಿಸುವುದಕ್ಕಾಗಿ ಒಂದು ಹೊಸ ಮನೆಯನ್ನು ಕಟ್ಟುವ ವೆಚ್ಚದ ಸಲುವಾಗಿ ಒಂದು ಕೋಟಿ ರೂಪಾಯಿಯನ್ನು ಸಹ ನೀಡತಕ್ಕದ್ದು ಮತ್ತು ಹಾಗೆ ಅವುಗಳನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳೊಳಗಾಗಿ ಯುವರಾಜ ಮತ್ತು ಅವರ ಪತ್ನಿ ಅರಮನೆಯ ಭಾಗವನ್ನು ಖಾಲಿ ಮಾಡತಕ್ಕದ್ದು ಮತ್ತು ಅದರ ಖಾಲಿ ಸ್ವಾಧೀನತೆಯನ್ನು ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ವಹಿಸಿಕೊಡತಕ್ಕದ್ದು.

## ಅಧ್ಯಾಯ III

## ಅರಮನೆಯ ನಿರ್ವಹಣೆ

**11. ಅರಮನೆಯ ನಿರ್ವಹಣೆ.-** 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವಂಥ ಅರಮನೆಯ ಸಾಮಾನ್ಯ ಮೇಲ್ವಿಚಾರಣೆ, ನಿರ್ದೇಶನ, ನಿಯಂತ್ರಣ ಮತ್ತು ನಿರ್ವಹಣೆ ಮತ್ತು ಅರಮನೆಯ ಸಂಬಂಧದಲ್ಲಿನ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು, 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶನ ನೀಡಿರುವಲ್ಲಿ, ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ತರುವಾಯ ಎಲ್ಲ ಇತರ ವ್ಯಕ್ತಿಗಳನ್ನು ಹೊರತುಪಡಿಸಿ, ಅರಮನೆಯ ಸಂಬಂಧದಲ್ಲಿ ಯಾವ ಅಧಿಕಾರಗಳನ್ನು ಚಲಾಯಿಸಲು ಮತ್ತು ಯಾವ ಕೃತ್ಯಗಳನ್ನು ಮಾಡಲು ಮಂಡಲಿಗೆ ಅಧಿಕಾರ ನೀಡಲಾಗಿದೆಯೋ ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಎಲ್ಲ ಕೃತ್ಯಗಳನ್ನು ಮಾಡಲು ಮಂಡಲಿಗೆ ಹಕ್ಕು ಇರತಕ್ಕದ್ದು.

**12. ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.-** (1) ಮಂಡಲಿಯಲ್ಲಿ ಅರಮನೆಯ ನಿರ್ವಹಣೆಯು ನಿಹಿತವಾದ ಮೇಲೆ ಅರಮನೆಯ ಆವರಣದೊಳಗೆ ಇರುವ ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳ ಆಡಳಿತ ಸಮಿತಿಗಳ ಹೊರತಾಗಿ, ಹಾಗೆ ನಿಹಿತವಾಗುವುದಕ್ಕೆ ನಿಕಟಪೂರ್ವದಲ್ಲಿ ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿದ್ದ ಎಲ್ಲ ವ್ಯಕ್ತಿಗಳು, ಅರಮನೆಯ ಸಂಬಂಧದಲ್ಲಿ ಅವರ ವಶದಲ್ಲಿರುವ ಎಲ್ಲ ಆಸ್ತಿಗಳು, ಲೆಕ್ಕದ ಪುಸ್ತಕಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಮಂಡಲಿಗೆ ಕೊಡಲು ಬದ್ಧರಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ವಿಷಯದ ಸಂಬಂಧದಲ್ಲಿ ತಾನು ಅಪೇಕ್ಷಣೀಯವೆಂದು ಭಾವಿಸುವಂಥ ನಿರ್ದೇಶನಗಳನ್ನು ಮಂಡಲಿಗೆ ನೀಡಬಹುದು ಮತ್ತು ಮಂಡಲಿಯೂ ಸಹ ಅರಮನೆಯ ಅಂಥ ನಿರ್ವಹಣೆಯ ಸಮಯದಲ್ಲಿ ಉದ್ಭವಿಸುವ ಇತರ ಯಾವುದೇ ವಿಷಯದ ಸಂಬಂಧದಲ್ಲಿ ಅಂಥ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಕೈಗೊಳ್ಳಬೇಕೆಂಬ ಬಗ್ಗೆ ಸೂಚನೆಗಳಿಗಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸುವುದು ತನಗೆ ಅಗತ್ಯವೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಹಾಗೆ ಅರ್ಜಿ ಸಲ್ಲಿಸಬಹುದು.

**13. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.**- (1) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವಂಥ ಮತ್ತು ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಸೇರಿದ ಅಥವಾ ಅರಮನೆಯು ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರದಿದ್ದರೆ ಹಾಗೆ ಸೇರಬಹುದಾಗಿದ್ದ, ಆ ಅರಮನೆಗೆ ಸಂಬಂಧಿಸಿದ ಯಾವುವೇ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದಪತ್ರಗಳನ್ನು ಗೊತ್ತುಪಡಿಸಿದ ದಿನಾಂಕದಂದು ತನ್ನ ಸ್ವಾಧೀನತೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿರುವ ಯಾರೇ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯು ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸದರಿ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದಪತ್ರಗಳ ಬಗ್ಗೆ ಲೆಕ್ಕ ನೀಡಲು ಬದ್ಧನಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಯ ಸ್ವಾಧೀನತೆಯನ್ನು ಪಡೆಯುವುದಕ್ಕೆ ಅವಶ್ಯಕವಾದ ಎಲ್ಲ ಕ್ರಮಗಳನ್ನು ರಾಜ್ಯ ಸರ್ಕಾರವು ಅಥವಾ ಮಂಡಲಿಯು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(3) ಕಾನೂನುಸಮ್ಮತ ಪ್ರತಿನಿಧಿಗಳು, ವಾರಸುದಾರರು ಮತ್ತು ವರ್ಗಾವಣೆ ಪಡೆದವರು 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಗೆ ಸಂಬಂಧಿಸಿದಂತೆ, ಗೊತ್ತುಪಡಿಸಿದ ದಿನಾಂಕದಂದು ಇದ್ದಂತೆ ಎಲ್ಲ ಆಸ್ತಿ ಮತ್ತು ಸ್ವತ್ತುಗಳ ಪೂರ್ಣ ಆಸ್ತಿಪಟ್ಟಿಯನ್ನು ರಾಜ್ಯ ಸರ್ಕಾರವು ಅಥವಾ ಮಂಡಲಿಯು ಈ ಪರವಾಗಿ ಅನುಮತಿಸಬಹುದಾದಂಥ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಒದಗಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಥವಾ ಮಂಡಲಿಯು ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ವರ್ಗಾವಣೆ ಪಡೆದವರಿಗೆ ಎಲ್ಲ ಯುಕ್ತ ಸೌಲಭ್ಯಗಳನ್ನು ನೀಡತಕ್ಕದ್ದು.

**14. ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳ ನಿರ್ವಹಣೆಯನ್ನು ನಿಯಂತ್ರಿಸುವುದು ಇತ್ಯಾದಿ.**- (1) ಈ ಅಧಿನಿಯದಲ್ಲಿ ಏನೇ ಇದ್ದರೂ ಅರಮನೆಯ ಆವರಣದಲ್ಲಿರುವ ದೇವಾಲಯಗಳು ಮತ್ತು ಇತರ ಪೂಜಾಸ್ಥಳಗಳ ನಿರ್ವಹಣೆಯು ಮಂಡಲಿಯಲ್ಲಿ ನಿಹಿತವಾಗತಕ್ಕದ್ದಲ್ಲ. ಆದರೆ ಮೈಸೂರು ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳ ಅಧಿನಿಯಮ, 1927ರ (1927ರ ಮೈಸೂರು ಅಧಿನಿಯಮ 7) ಉಪಬಂಧಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಸಂವಾದಿ ಕಾನೂನಿನ ಅನುಸಾರವಾಗಿ ನಿಯಂತ್ರಿಸಲ್ಪಡುವುದು ಮುಂದುವರೆಯತಕ್ಕದ್ದು.

(2) ಸಂದೇಹಗಳ ನಿವಾರಣೆಗಾಗಿ, ಈ ಅಧಿನಿಯಮದಲ್ಲಿರುವ ಯಾವುದೂ, ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರೂ ಸೇರಿದಂತೆ ಭಕ್ತರು ದೇವಾಲಯದಲ್ಲಿ ಪೂಜೆ ನಡೆಸುವುದಕ್ಕೆ ಮತ್ತು ಧಾರ್ಮಿಕ ವಿಧಿಗಳನ್ನು ಅಥವಾ ಇತರ ಸಾಂಪ್ರದಾಯಿಕ ಧರ್ಮಾಚರಣೆಗಳನ್ನು ನಡೆಸುವುದಕ್ಕೆ ಅಥವಾ ಅರಮನೆಯ ಆವರಣದಲ್ಲಿರುವ ಯಾವುದೇ ದೇವಾಲಯ ಅಥವಾ ಇತರ ಯಾವುದೇ ಪೂಜಾಸ್ಥಳದಲ್ಲಿ ಯಾವುದೇ ದೇವತೆಯನ್ನು ಪೂಜಿಸಲು ಅಥವಾ ಧಾರ್ಮಿಕ ವಿಧಿ ಅಥವಾ ಸಾಂಪ್ರದಾಯಿಕ ಧರ್ಮಾಚರಣೆಗಳನ್ನು ನಡೆಸಲು ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರಿಗೆ ಇರುವ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ IV

## ಹಣ ಸಂದಾಯದ ಕಮೀಷನರು

**15. ಹಣ ಸಂದಾಯದ ಕಮೀಷನರ ನೇಮಕ.**- (1) 8ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿನ ಹಂಚಿಕೆಯ ಉದ್ದೇಶಕ್ಕಾಗಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ರಾಜ್ಯ ಸರ್ಕಾರವು ಒಬ್ಬ ಹಣ ಸಂದಾಯದ ಕಮೀಷನರನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು ಕಮೀಷನರಿಗೆ ಸಹಾಯಮಾಡಲು ತಾನು ಯುಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಗಳನ್ನು ನೇಮಕ ಮಾಡಬಹುದು ಮತ್ತು ನಂತರ ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಒಬ್ಬರು ಅಥವಾ ಹೆಚ್ಚು

ವ್ಯಕ್ತಿಗಳಿಗೆ ಸಹ ಅಧಿಕಾರ ನೀಡಬಹುದು ಮತ್ತು ಬೇರೆ ಬೇರೆ ಅಧಿಕಾರಗಳನ್ನು ಚಲಾಯಿಸಲು ಬೇರೆ ಬೇರೆ ವ್ಯಕ್ತಿಗಳಿಗೆ ಅಧಿಕಾರ ನೀಡಬಹುದು.

(3) ಕಮೀಷನರು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಕಮೀಷನರಿಂದ ಅಧಿಕಾರ ಪಡೆದ ಯಾರೇ ವ್ಯಕ್ತಿಯು, ಈ ಅಧಿಕಾರಗಳನ್ನು, ಅವುಗಳನ್ನು ಅಧಿಕಾರ ನೀಡುವ ಮೂಲಕವಲ್ಲದೆ ಈ ಅಧಿನಿಯಮದ ಅಡಿಯಲ್ಲಿ ನೇರವಾಗಿ ಆ ವ್ಯಕ್ತಿಗೆ ಪ್ರದತ್ತಗೊಳಿಸಿದ್ದರೆ ಚಲಾಯಿಸಬಹುದಾಗಿದ್ದ ರೀತಿಯಲ್ಲಿ ಮತ್ತು ಅದೇ ಪರಿಣಾಮದೊಂದಿಗೆ ಚಲಾಯಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಮೀಷನರ್ ಮತ್ತು ಇತರ ವ್ಯಕ್ತಿಗಳ ವೇತನಗಳು ಮತ್ತು ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

**16. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣಸಂದಾಯ.**- (1) ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾನೂನುಸಮ್ಮತ ಪ್ರತಿನಿಧಿಗಳಿಗೆ, ವಾರಸುದಾರರಿಗೆ ಮತ್ತು ವರ್ಗಾವಣೆ ಪಡೆದವರಿಗೆ ಸಂದಾಯ ಮಾಡುವುದಕ್ಕಾಗಿ ಕಮೀಷನರ್ ಬಳಿ,-

(ಎ) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ಸಮನಾದ ಮೊಬಲಗನ್ನು, ಮತ್ತು

(ಬಿ) 9ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿಗೆ ಸಮನಾದ ಮೊಬಲಗನ್ನು,

- ನಗದು ರೂಪದಲ್ಲಿ ಠೇವಣಿ ಇಡತಕ್ಕದ್ದು.

(2) ರಾಜ್ಯ ಸರ್ಕಾರವು ಕಮೀಷನರ ಹೆಸರಿನಲ್ಲಿ ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿ ಒಂದು ಠೇವಣಿ ಖಾತೆಯನ್ನು ತೆರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯಮಾಡಿದ ಪ್ರತಿಯೊಂದು ಮೊಬಲಗನ್ನು ಆತನು ಠೇವಣಿ ಖಾತೆಗೆ ಜಮಾ ಮಾಡತಕ್ಕದ್ದು ಮತ್ತು ಸದರಿ ಠೇವಣಿ ಖಾತೆಯನ್ನು ಕಮೀಷನರು ನಿರ್ವಹಿಸತಕ್ಕದ್ದು. (3) ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ಅರಮನೆಗೆ ಸಂಬಂಧಿಸಿದಂತೆ ತನಗೆ ಮಾಡಲಾದ ಹಣ ಸಂದಾಯದ ಬಗ್ಗೆ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು.

(4) (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಠೇವಣಿ ಖಾತೆಗೆ ಜಮೆಯಾದ ಹಣದ ಮೊಬಲಗಿನ ಮೇಲಿನ ಬಡ್ಡಿಯು, ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಪ್ರಯೋಜನಕ್ಕೆ ಪ್ರಾಪ್ತವಾಗತಕ್ಕದ್ದು.

**17. ರಾಜ್ಯ ಸರ್ಕಾರದ ಮತ್ತು ಮಂಡಳಿಯ ಕೆಲವು ಅಧಿಕಾರಗಳು.**- (1) ಸಂದರ್ಭಾನುಸಾರ, ರಾಜ್ಯ ಸರ್ಕಾರ ಅಥವಾ ಮಂಡಲಿಯು, ಇತರ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಗೆ ಸಂಬಂಧಿಸಿದಂತೆ ಬಾಕಿ ಇರುವ ಮತ್ತು ಗೊತ್ತುಪಡಿಸಿದ ದಿನಾಂಕದ ನಂತರ ವಸೂಲಿಯಾದ ಯಾವುದೇ ಮೊಬಲಗನ್ನು, ಹಾಗೆ ವಸೂಲಿಯಾದ ಮೊಬಲಗು ಗೊತ್ತುಪಡಿಸಿದ ದಿನಾಂಕದ ಹಿಂದಿನ ಅವಧಿಗೆ ಸಂಬಂಧಪಟ್ಟಿದ್ದರೂ ಸಹ, ಗೊತ್ತುಪಡಿಸಿದ ದಿನಾಂಕದವರೆಗೆ ಸ್ವೀಕರಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಸಂದರ್ಭಾನುಸಾರ ರಾಜ್ಯ ಸರ್ಕಾರ ಅಥವಾ ಮಂಡಲಿಯು ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರ ಯಾವುದೇ ಹೊಣೆಗಾರಿಕೆಯನ್ನು ತೀರಿಸುವುದಕ್ಕಾಗಿ, ಗೊತ್ತುಪಡಿಸಿದ ದಿನಾಂಕಕ್ಕಿಂತ ಹಿಂದಿನ ಅವಧಿಗೆ ಸಂಬಂಧಿಸಿದ ಆದರೆ ಗೊತ್ತುಪಡಿಸಿದ ದಿನಾಂಕದ ನಂತರ ರಾಜ್ಯ ಸರ್ಕಾರ ಅಥವಾ ಮಂಡಲಿಯು ಮಾಡಿದ ಪ್ರತಿಯೊಂದು ಸಂದಾಯದ ಬಗ್ಗೆ ಕಮೀಷನರಿಗೆ ಕ್ಲೇಮು ಸಲ್ಲಿಸಬಹುದು ಮತ್ತು ಅಂಥ ಪ್ರತಿಯೊಂದು ಕ್ಲೇಮಿನ ಆದ್ಯತೆಯು ರಾಜ್ಯ ಸರ್ಕಾರ ಅಥವಾ ಮಂಡಲಿಯು ತೀರಿಸಿದಂಥ ಹೊಣೆಗಾರಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಆದ್ಯತೆಗಳಿಗನುಸಾರವಾಗಿ ಇರತಕ್ಕದ್ದು.

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ತೀರುವಳಿಯಾಗಿಲ್ಲದ ಆದರೆ ಗೊತ್ತುಪಡಿಸಿದ ದಿನಾಂಕಕ್ಕೆ ಹಿಂದಿನ, ಅರಮನೆಗೆ ಸಂಬಂಧಿಸಿದ ಯಾವುವೇ ವ್ಯವಹಾರಗಳ ಬಗ್ಗೆ ಕಾನೂನುಸಮ್ಮತ ಪ್ರತಿನಿಧಿಗಳ, ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಹೊಣೆಗಾರಿಕೆಗಳು, ಸಂದರ್ಭಾನುಸಾರ ಕಾನೂನುಸಮ್ಮತ ಪ್ರತಿನಿಧಿಗಳ, ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಹೊಣೆಗಾರಿಕೆಗಳಾಗಿರತಕ್ಕದ್ದು.

**18. ಕ್ಲೇಮುಗಳನ್ನು ಕಮೀಷನರಿಗೆ ಮಾಡತಕ್ಕದ್ದು.**- ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಅರಮನೆಯ ಸಂಬಂಧದಲ್ಲಿ ಅನುಸೂಚಿ ಖಖಖ ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗ್ಗೆ ಕ್ಲೇಮು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಮೀಷನರಿಗೆ ಕ್ಲೇಮನ್ನು ಸಲ್ಲಿಸತಕ್ಕದ್ದು :

ಪರಂತು, ಕ್ಲೇಮುದಾರನಿಗೆ ಮೂವತ್ತು ದಿನಗಳ ಅವಧಿಯೊಳಗಾಗಿ ಕ್ಲೇಮನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಸಾಧ್ಯವಾಗಲಿಲ್ಲವೆಂದು ಕಮೀಷನರಿಗೆ ಮನವರಿಕೆಯಾದರೆ, ಆತನು ಮುಂದಿನ ಮೂವತ್ತು ದಿನಗಳ ಅವಧಿಯೊಳಗೆ ಕ್ಲೇಮನ್ನು ಸ್ವೀಕರಿಸಬಹುದು ಆದರೆ ನಂತರ ಸ್ವೀಕರಿಸತಕ್ಕದ್ದಲ್ಲ.

**19. ಕ್ಲೇಮುಗಳ ಆದ್ಯತೆ.**-18ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಕ್ಲೇಮುಗಳ ಆದ್ಯತೆಯು ಈ ಮುಂದಿನ ತತ್ವಗಳಿಗೆ ಅನುಸಾರವಾಗಿರತಕ್ಕದ್ದು, ಎಂದರೆ: -

(ಎ) ಪ್ರವರ್ಗ ಖ ಕ್ಕೆ ಇತರ ಎಲ್ಲ ಪ್ರವರ್ಗಗಳಿಗಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಪ್ರವರ್ಗ ಖಖ ಕ್ಕೆ ಪ್ರವರ್ಗ ಖಖಖ ಕ್ಕಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಉಳಿದವುಗಳು ಆ ಕ್ರಮದಲ್ಲೇ ಇರತಕ್ಕದ್ದು ;

(ಬಿ) ಪ್ರತಿಯೊಂದು ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಕ್ಲೇಮುಗಳು ಸಮಾನವಾಗಿರತಕ್ಕದ್ದು ಮತ್ತು ಅವುಗಳನ್ನು ಪೂರ್ಣವಾಗಿ ಸಂದಾಯ ಮಾಡತಕ್ಕದ್ದು. ಆದರೆ ಕ್ಲೇಮುಗಳನ್ನು ಪೂರ್ಣವಾಗಿ ಸಂದಾಯ ಮಾಡಲು ಸಾಕಾಗುವಷ್ಟು ಮೊಬಲಗು ಇಲ್ಲದಿರುವಲ್ಲಿ ಅವುಗಳು ಸಮಾನ ಅನುಪಾತದಲ್ಲಿ ಕಡಿಮೆಗೊಳ್ಳತಕ್ಕದ್ದು ಮತ್ತು ಅದಕ್ಕನುಸಾರವಾಗಿ ಸಂದಾಯ ಮಾಡತಕ್ಕದ್ದು ; ಮತ್ತು

(ಸಿ) ಕೆಳಗಿನ ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ತೀರಿಸುವ ಪ್ರಶ್ನೆಯು, ಅದಕ್ಕೆ ನಿಕಟ ಉನ್ನತ ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಿದ ನಂತರವೂ ಹೆಚ್ಚುವರಿ ಮೊಬಲಗು ಉಳಿದಲ್ಲಿ ಮಾತ್ರ ಉದ್ಭವಿಸತಕ್ಕದ್ದು.

**20. ಕ್ಲೇಮುಗಳ ಪರಿಶೀಲನೆ.**- (1) 18ನೇ ಪ್ರಕರಣದ ಅಡಿಯಲ್ಲಿ ಕ್ಲೇಮುಗಳನ್ನು ಸ್ವೀಕರಿಸಿದ ನಂತರ ಕಮೀಷನರು ಅನುಸೂಚಿ ಖಖಖ ರಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳ ಕ್ರಮಕ್ಕನುಸಾರವಾಗಿ ಕ್ಲೇಮುಗಳನ್ನು ಪಟ್ಟಿ ಮಾಡತಕ್ಕದ್ದು ಮತ್ತು ಅಂಥ ಆದ್ಯತೆಯ ಕ್ರಮಕ್ಕನುಸಾರವಾಗಿ ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಕ್ಲೇಮುಗಳ ಪರಿಶೀಲನೆ ಮಾಡಿದಾಗ, ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಿದ ಮೊಬಲಗು ಯಾವುದೇ ಕೆಳಗಿನ ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಲು ಸಾಕಾಗುವಷ್ಟು ಇಲ್ಲವೆಂದು ಅಭಿಪ್ರಾಯಪಟ್ಟಲ್ಲಿ, ಅಂಥ ಪ್ರವರ್ಗಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು ಆತನು ಪರಿಶೀಲಿಸುವುದು ಅಗತ್ಯವಾಗಿರತಕ್ಕದ್ದಲ್ಲ.

**21. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.**- (1) ಖಖಖ ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳಿಗನುಗುಣವಾಗಿ ಕ್ಲೇಮುಗಳನ್ನು ಪರಿಶೀಲಿಸಿದ ನಂತರ ಕಮೀಷನರು, ಪ್ರತಿಯೊಬ್ಬ ಕ್ಲೇಮುದಾರನು ತನ್ನ ಕ್ಲೇಮಿನ ಬಗ್ಗೆ ರುಜುವಾತನ್ನು ಯಾವ ನಿಶ್ಚಿತ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸಲ್ಲಿಸಬೇಕೋ ಆ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

(2) ಹಾಗೆ ನಿಗದಿಪಡಿಸಿದ ದಿನಾಂಕದ ಬಗ್ಗೆ ನೋಟೀಸನ್ನು ಹದಿನಾಲ್ಕು ದಿನಗಳಿಗೆ ಕಡಿಮೆ ಇಲ್ಲದಂತೆ ದೇಶದಲ್ಲಿ ವ್ಯಾಪಕ ಪ್ರಸಾರವಿರುವ ಇಂಗ್ಲೀಷ್ ಭಾಷೆಯ ದಿನಪತ್ರಿಕೆಯೊಂದರಲ್ಲಿ ಮತ್ತು ರಾಜ್ಯದಲ್ಲಿ ವ್ಯಾಪಕ ಪ್ರಸಾರವುಳ್ಳ ಕನ್ನಡ ಭಾಷೆಯ ದಿನಪತ್ರಿಕೆಯೊಂದರಲ್ಲಿ ಜಾಹೀರಾತಿನ ಮೂಲಕ ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ನೋಟೀಸು, ಕ್ಲೇಮುದಾರನು ಜಾಹೀರಾತಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಕಮೀಷನರಲ್ಲಿ ತನ್ನ ಕ್ಲೇಮಿನ ರುಜುವಾತು ಸಲ್ಲಿಸುವಂತೆ ಅಗತ್ಯಪಡಿಸತಕ್ಕದ್ದು.

(3) ಕಮೀಷನರು ನಿರ್ದಿಷ್ಟಪಡಿಸಿದ ಸಮಯದೊಳಗೆ ರುಜುವಾತನ್ನು ಸಲ್ಲಿಸಲು ತಪ್ಪಿದ ಪ್ರತಿಯೊಬ್ಬ ಕ್ಲೇಮುದಾರನು, ಕಮೀಷನರು ಮಾಡುವ ಹಂಚಿಕೆಯಿಂದ ಹೊರತಾಗತಕ್ಕದ್ದು.

(4) ಕಮೀಷನರು ತಾನು ಅವಶ್ಯಕವೆಂದು ಅಭಿಪ್ರಾಯಪಡುವಂಥ ತನಿಖೆಯನ್ನು ನಡೆಸಿದ ನಂತರ ಮತ್ತು ಕ್ಲೇಮುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ, ಅಂಥ ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಮತ್ತು ಲಿಖಿತ ಆದೇಶದ ಮೂಲಕ ಕ್ಲೇಮನ್ನು ಪೂರ್ಣವಾಗಿ

ಅಥವಾ ಭಾಗಶಃ ಅಂಗೀಕರಿಸಬಹುದು ಅಥವಾ ನಿರಾಕರಿಸಬಹುದು ಮತ್ತು ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ವರ್ಗಾವಣೆ ಪಡೆದವರ ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವಾಗ ಕಮೀಷನರು 1976ರ ನಗರ ಭೂ (ಮಿತಿ ಮತ್ತು ನಿಯಂತ್ರಣ) ಅಧಿನಿಯಮದ ಅಡಿಯಲ್ಲಿನ ಸಕ್ಷಮ ಪ್ರಾಧಿಕಾರದ ಆದೇಶಗಳ ವಿರುದ್ಧ ಇತ್ಯರ್ಥವಾಗದೆ ಉಳಿದಿರುವ ರಿಟ್ ಅರ್ಜಿಗಳ ಸಂದರ್ಭದಲ್ಲಿ ಹೊರಡಿಸಲಾದ ಅಂತಿಮ ಆದೇಶದ ಪರಿಣಾಮವನ್ನು ಮತ್ತು ಅಧಿನಿಯಮದ ಅಡಿಯಲ್ಲಿನ ರಾಜ್ಯ ಸರ್ಕಾರದ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಮೊಬಲಗನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿ ಅಥವಾ ವ್ಯಕ್ತಿಗಳು ಯಾರೆಂಬ ಬಗೆಗಿನ ವಿವಾದವನ್ನು ಮತ್ತು ಯಾವನೇ ಮೃತ ಕ್ಲೇಮುದಾರನ ಕಾನೂನುಸಮ್ಮತ ಪ್ರತಿನಿಧಿ ಯಾರೆಂಬ ಬಗೆಗಿನ ವಿವಾದವನ್ನು ಸಹ ಕಮೀಷನರು ನಿರ್ಧರಿಸತಕ್ಕದ್ದು.

(5) ಕಮೀಷನರು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಉದ್ಭವಿಸುವ ಎಲ್ಲ ವಿಷಯಗಳ ಬಗ್ಗೆ ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದಲ್ಲಿ 1908 ರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ನಿಹಿತವಾಗಿರುವಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ : -

(ಎ) ಯಾವೊಬ್ಬ ಸಾಕ್ಷಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನ ವಿಚಾರಣೆ ನಡೆಸುವುದು;

(ಬಿ) ಸಾಕ್ಷ್ಯವಾಗಿ ಬಳಸಬಹುದಾದ ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಪತ್ತೆ ಮಾಡುವುದು ಮತ್ತು ಹಾಜರುಪಡಿಸುವುದು ;

(ಸಿ) ಅಫಿಡವಿಟ್ಟಿನ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳ ವಿಚಾರಣೆಗಾಗಿ ಕಮೀಷನನ್ನು ನೇಮಿಸುವುದು.

(6) ಕಮೀಷನರ ಮುಂದಿರುವ ಯಾವುದೇ ತನಿಖೆಯು, 1860ರ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗಿನ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಕಮೀಷನರನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ 195ನೇ ಪ್ರಕರಣ ಮತ್ತು ಘಿಘಿಗಿಉ ನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(7) ಕಮೀಷನರ ತೀರ್ಮಾನದಿಂದ ಬಾಧಿತನಾದ ಕ್ಲೇಮುದಾರನು, ಆ ತೀರ್ಮಾನದ ವಿರುದ್ಧವಾಗಿ ಯಾವ ಜಿಲ್ಲಾ ನ್ಯಾಯಾಲಯದ ಸ್ಥಳೀಯ ಪರಿಮಿತಿಗಳ ಅಧಿಕಾರ ವ್ಯಾಪ್ತಿಯೊಳಗೆ ಅರಮನೆಯು ಇರುವುದೋ ಆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**22. ಕಮೀಷನರಿಂದ ಮೊಬಲಗಿನ ಹಂಚಿಕೆ.-** (1) ಈ ಅಧಿನಿಯಮದ ಅಡಿಯಲ್ಲಿ ಒಂದು ಕ್ಲೇಮನ್ನು ಅಂಗೀಕರಿಸಿದ ನಂತರ, ಅಂಥ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ಮೊಬಲಗನ್ನು ಕಮೀಷನರು ಅಂಥ ಮೊಬಲಗು ಬಾಕಿಯಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯದ ನಂತರ ಅಂಥ ಕ್ಲೇಮುಗಳ ಸಂಬಂಧದಲ್ಲಿ ಅರಮನೆಯ ಬಗೆಗಿನ ಹೊಣೆಗಾರಿಕೆಗಳು ತೀರುವಳಿಯಾಗತಕ್ಕದ್ದು.

(2) ಅರಮನೆಗೆ ಸಂಬಂಧಪಟ್ಟಂತೆ ಕಮೀಷನರಿಗೆ ಸಂದಾಯಮಾಡಿದ ಮೊಬಲಗಿನ ಪೈಕಿ ಖಖಖನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಹೊಣೆಗಾರಿಕೆಗಳನ್ನು ಪೂರೈಸಿದ ತರುವಾಯ ಬಾಕಿ ಉಳಿದಿರುವ ಹಣವನ್ನು ಕಮೀಷನರು ಕಾನೂನುಸಮ್ಮತ ಪ್ರತಿನಿಧಿಗಳು, ವಾರಸುದಾರರು, ಮತ್ತು ವರ್ಗಾವಣೆ ಪಡೆದವರಿಗೆ ವಿತರಣೆ ಮಾಡತಕ್ಕದ್ದು.

**23. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.-** ಕಮೀಷನರಿಗೆ ಸಂದಾಯ ಮಾಡಿದ ಯಾವುದೇ ಮೊಬಲಗಿನ ಪೈಕಿ ಕಮೀಷನರ ಹುದ್ದೆಯನ್ನು ಅಂತಿಮವಾಗಿ ಕೊನೆಗೊಳಿಸುವ ದಿನಾಂಕಕ್ಕೆ ನಿಕಟಪೂರ್ವ ದಿನಾಂಕದಂದು ಹಂಚಿಕೆಮಾಡಿಲ್ಲದೆ ಅಥವಾ ಕ್ಲೇಮು ಮಾಡಿಲ್ಲದೆ ಉಳಿದಿರುವ ಮೊಬಲಗನ್ನು ಕಮೀಷನರು ರಾಜ್ಯ ಸರ್ಕಾರದ ಸಾಮಾನ್ಯ ಕಂದಾಯ ಖಾತೆಗೆ ವರ್ಗಾಯಿಸತಕ್ಕದ್ದು. ಆದರೆ ಹಾಗೆ ವರ್ಗಾಯಿಸಲಾದ ಯಾವುದೇ ಮೊಬಲಗಿನ ಕ್ಲೇಮನ್ನು ಅಂಥ ಸಂದಾಯಕ್ಕೆ

ಹಕ್ಕುಳ್ಳ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು ಮತ್ತು ಹಾಗೆ ವರ್ಗಾವಣೆ ಮಾಡಿಲ್ಲದಿದ್ದರೆ ಹೇಗೋ ಹಾಗೇ ವ್ಯವಹರಿಸತಕ್ಕದ್ದು ಮತ್ತು ಕ್ಲೇಮಿನ ಸಂದಾಯಕ್ಕಾಗಿ ಮಾಡಲಾಗುವ ಆದೇಶ ಯಾವುದಾದರೂ ಇದ್ದಲ್ಲಿ ಅದನ್ನು ಕಂದಾಯದ ಮರುಪಾವತಿಗಾಗಿ ಮಾಡಿದ ಆದೇಶದಂತೆ ಭಾವಿಸತಕ್ಕದ್ದು.

## ಅಧ್ಯಾಯ V

## ಟ್ರಸ್ಟಿಗಳ ಮಂಡಲಿ

**24. ಟ್ರಸ್ಟಿಗಳ ಮಂಡಲಿ.-** (1) ಅರಮನೆಯ ಆಡಳಿತ ನಿರ್ವಹಣೆಗಾಗಿ ಈ ಮುಂದಿನವರನ್ನು ಒಳಗೊಂಡ ಟ್ರಸ್ಟಿಗಳ ಮಂಡಲಿ ಇರತಕ್ಕದ್ದು :-

(1) ಸರ್ಕಾರದ ಮುಖ್ಯ ಕಾರ್ಯದರ್ಶಿ — ಅಧ್ಯಕ್ಷರು

(2) ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ — ಸದಸ್ಯರು

(3) ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ — ಸದಸ್ಯರು

(4) ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ — ಸದಸ್ಯರು

(5) ಕಂದಾಯ ಇಲಾಖೆಯಲ್ಲಿ ಮುಜರಾಯಿ ಸಂಸ್ಥೆಗಳ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ — ಸದಸ್ಯರು

[1][(6) ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರು. – ಸದಸ್ಯರು][1]

(7) ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ — ಸದಸ್ಯರು

(8) ರಾಜ್ಯ ಲಲಿತಕಲಾ ಅಕಾಡೆಮಿಯನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಒಬ್ಬ ವ್ಯಕ್ತಿ — ಸದಸ್ಯರು

(9) ಕಾನೂನು, ಸಾರ್ವಜನಿಕ ಆಡಳಿತ, ಕಲೆ ಅಥವಾ ಸಂಸ್ಕೃತಿ ಕ್ಷೇತ್ರಗಳಲ್ಲಿ ಖ್ಯಾತರಾದ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ ಮೂವರು ವ್ಯಕ್ತಿಗಳು — ಸದಸ್ಯರು

(10) ಕಾರ್ಯನಿರ್ವಾಹಕ ಅಧಿಕಾರಿ — ಸದಸ್ಯ- ಕಾರ್ಯದರ್ಶಿ

(2) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು (8) ಮತ್ತು (9)ನೇ ಖಂಡಗಳ ಅಡಿಯಲ್ಲಿ ನಾಮನಿರ್ದೇಶಿತರಾದ ವ್ಯಕ್ತಿಗಳು ಮೂರು ವರ್ಷಗಳ ಅವಧಿಗೆ ಹುದ್ದೆ ಹೊಂದಿರತಕ್ಕದ್ದು ಮತ್ತು ಮರು ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದು.

(3) ಮಂಡಲಿಯ ಸದಸ್ಯರು ಗೊತ್ತುಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(4) ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಅಂಥ ಸ್ಥಳದಲ್ಲಿ ಮಂಡಲಿಯು ಸಭೆ ಸೇರತಕ್ಕದ್ದು ಮತ್ತು ಅಂಥ ವಿಧಾನದಲ್ಲಿ ತನ್ನ ವ್ಯವಹಾರಗಳನ್ನು ನಿರ್ವಹಿಸತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 34ರ ಮೂಲಕ ದಿನಾಂಕ:12.03.2013ರಿಂದ ಪ್ರತಿಯೋಜಿಸಲಾಗಿದೆ

**25. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳಿಗೊಳಪಟ್ಟು ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:-

(ಎ) ಅರಮನೆಯ ಆಡಳಿತ ಮತ್ತು ನಿರ್ವಹಣೆ ನಡೆಸುವುದು ;

(ಬಿ) ಅರಮನೆಯ ಕಟ್ಟಡ ಮತ್ತು ಅದರ ಸುತ್ತಮುತ್ತಲಿನವುಗಳನ್ನು ಸ್ಮಾರಕಗಳನ್ನಾಗಿ ಸಂರಕ್ಷಿಸುವುದು;

(ಸಿ) ಅರಮನೆಯ ಸುತ್ತಮುತ್ತಲಿನ ಜಾಗದಲ್ಲಿ ಉದ್ಯಾನಗಳು, ತೋಟಗಳನ್ನು ನಿರ್ವಹಿಸುವುದು ಮತ್ತು ಮರಗಳನ್ನು ಕಾಪಾಡಿಕೊಂಡುಬರುವುದು;

(ಡಿ) ಅರಮನೆಯ ಸುತ್ತಮುತ್ತಲಿನ ಭೂಮಿಯನ್ನು ತೋಟಗಾರಿಕೆ ಉದ್ಯಾನವನ್ನಾಗಿ ಅಭಿವೃದ್ಧಿ ಪಡಿಸಲು ಬಳಸಿಕೊಳ್ಳುವುದು;

(ಇ) ರಾಜಸಿಂಹಾಸನಗಳು, ರಾಜಮುಕುಟಗಳು, ಅಂಬಾರಿ, ರಾಜರ ಉಡುಗೆ ತೊಡುಗೆಗಳು ಹಾಗೂ ಆಭರಣಗಳೂ ಸೇರಿದಂತೆ ರಾಜಭಂಡಾರವನ್ನು ಮತ್ತು ಇತರ ಎಲ್ಲ ಕಲಾಕೃತಿಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು, ಪೀಠೋಪಕರಣಗಳನ್ನು ರಕ್ಷಿಸಿ ಕಾಪಾಡಿಕೊಂಡುಬರುವದು ;

(ಎಫ್) ರಾಜ್ಯ ಸರ್ಕಾರವು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅರಮನೆ, ವಸ್ತು ಸಂಗ್ರಹಾಲಯ, ಕಲಾಕೃತಿಗಳ ಗ್ಯಾಲರಿ ಮತ್ತು ತೋಟಕ್ಕೆ ಪ್ರವೇಶ ಶುಲ್ಕವನ್ನು ವಿಧಿಸುವುದು ; ಮತ್ತು

(ಜಿ) ಅರಮನೆಯ ದಕ್ಷ ಆಡಳಿತಕ್ಕೆ ಪ್ರಾಸಂಗಿಕವಾದ ಅಥವಾ ಅನುಕೂಲಕರವಾದ ಹಾಗೂ ನಿಯಮಿಸಬಹುದಾದಂಥ ಯಾವುವೇ ಕೃತ್ಯಗಳನ್ನು ಮಾಡುವುದು.

**26. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.-** (1) ರಾಜ್ಯ ಸರ್ಕಾರವು ಮಂಡಲಿಗೆ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮತ್ತು ಆತನಿಗೆ ನೆರವು ನೀಡಲು ತಾನು ಅವಶ್ಯಕವೆಂದು ಭಾವಿಸುವಂಥ ಸಂಖ್ಯೆಯ ಇತರ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಸಂದಾಯವಾಗಬೇಕಾದ ವೇತನ ಮತ್ತು ಇತರ ಭತ್ಯೆಗಳನ್ನು ಮಂಡಲಿಯ ನಿಧಿಯಿಂದ ಭರಿಸತಕ್ಕದ್ದು.

(3) ರಾಜ್ಯ ಸರ್ಕಾರವು ನೇಮಕ ಮಾಡಿದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳನ್ನು 1860ರ ದಂಡಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಬರುವ ಲೋಕನೌಕರರೆಂಬುದಾಗಿ ಭಾವಿಸತಕ್ಕದ್ದು.

**27. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ರಾಜ್ಯ ಸರ್ಕಾರವು ನಿಯಮಗಳಲ್ಲಿ ಅಥವಾ ಯಾವುವೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಲ್ಲಿ ಹೇಳಲಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಮಂಡಲಿಯ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಕಾರ್ಯನಿರ್ವಾಹಕ ಅಧಿಕಾರಿಯು,-

(ಎ) ಮಂಡಲಿಯ ವ್ಯವಹಾರಗಳ ನಿರ್ವಹಣೆಯ ಅಧಿಕಾರವನ್ನು ಹೊಂದಿರತಕ್ಕದ್ದು ;

(ಬಿ) ಮಂಡಲಿಗೆ ಸೇರಿದ ಎಲ್ಲ ಸ್ವತ್ತುಗಳು, ದಾಖಲೆಗಳು, ಹಣ, ವರ್ಣ ಚಿತ್ರಗಳು, ನಿಧಿಗಳು ಮತ್ತು ಇತರ ಅಮೂಲ್ಯ ವಸ್ತುಗಳ ಸೂಕ್ತ ಅಭಿರಕ್ಷೆ ಹೊಂದಿರಲು ಜವಾಬ್ದಾರನಾಗಿರತಕ್ಕದ್ದು ; ಮತ್ತು

(ಸಿ) ಮಂಡಲಿಯ ಆದಾಯದ ಸೂಕ್ತ ವಸೂಲಿಗೆ ಮತ್ತು ವೆಚ್ಚಗಳನ್ನು ಭರಿಸುವುದಕ್ಕೆ ಏರ್ಪಾಡು ಮಾಡತಕ್ಕದ್ದು.

(2) ಕಾರ್ಯನಿರ್ವಾಹಕ ಅಧಿಕಾರಿಯು ತುರ್ತು ಪರಿಸ್ಥಿತಿಯಲ್ಲಿ ಆ ವರ್ಷದ ಬಜೆಟ್ಟಿನಲ್ಲಿ ಹಣ ಏರ್ಪಾಡು ಮಾಡಿಲ್ಲದ ಯಾವುದೇ ಕಾಮಗಾರಿಯನ್ನು ನೇರವಾಗಿ ನಿರ್ವಹಿಸುವಂತೆ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ಮತ್ತು ಮಂಡಲಿಯ ಸ್ವತ್ತುಗಳ ಸಂರಕ್ಷಣೆಗಾಗಿ ತಾನು ಅವಶ್ಯಕವೆಂದು ಅಭಿಪ್ರಾಯಪಡುವಂಥ ಕಾರ್ಯವನ್ನು ಕೂಡಲೇ ನಿರ್ವಹಿಸುವಂತೆ ನಿರ್ದೇಶಿಸಬಹುದು ಮತ್ತು ಅಂಥ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಅಥವಾ ಅಂಥ ಕಾರ್ಯವನ್ನು ಮಾಡುವುದಕ್ಕೆ ತಗಲುವ ವೆಚ್ಚಗಳನ್ನು ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು :

ಪರಂತು ಕಾರ್ಯನಿರ್ವಾಹಕ ಅಧಿಕಾರಿಯು ಈ ಉಪ ಪ್ರಕರಣದ ಅಡಿಯಲ್ಲಿ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಮತ್ತು ಅದಕ್ಕೆ ಕಾರಣಗಳನ್ನು ಕೂಡಲೇ ಮಂಡಲಿಗೆ ವರದಿ ಮಾಡತಕ್ಕದ್ದು.

(3) ಕಾರ್ಯನಿರ್ವಾಹಕ ಅಧಿಕಾರಿಯು 26ನೇ ಪ್ರಕರಣದ ಅಡಿಯಲ್ಲಿ ಆತನಿಗೆ ನೆರವು ನೀಡಲು ನೇಮಕ ಮಾಡಲಾದ ಯಾರೇ ಅಧಿಕಾರಿಗೆ ಮಂಡಲಿಯು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿಧಿಸಬಹುದಾದಂಥ ನಿರ್ಬಂಧ ಮತ್ತು ನಿಯಂತ್ರಣಕ್ಕೊಳಪಟ್ಟು ಮತ್ತು ಪ್ರತ್ಯಾಯೋಜನೆ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಪರಿಮಿತಿಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು ಈ ಅಧಿನಿಯಮದಿಂದ ಅಥವಾ ಅದರಡಿಯಲ್ಲಿ ಅವನಿಗೆ ಪ್ರದತ್ತವಾದ ಯಾವುವೇ ಅಧಿಕಾರಗಳು ಮತ್ತು ವಿಧಿಸಿದ

ಯಾವುವೇ ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

(4) ಮಂಡಲಿಯು, ನಿಯಮಿಸಬಹುದಾದಂಥ ಅದರ ಅಧಿಕಾರಗಳು, ಕರ್ತವ್ಯಗಳು ಅಥವಾ ಪ್ರಕಾರ್ಯಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**28. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾದ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.**- ಮಂಡಲಿಯು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪತ್ರಕ್ಕೆ ಕಾರ್ಯನಿರ್ವಾಹಕ ಅಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಅದನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ದಾವೆಗಳಲ್ಲಿ ಮತ್ತು ಕಾನೂನು ವ್ಯವಹರಣೆಗಳಲ್ಲಿ ನೋಟೀಸನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ನೀಡತಕ್ಕದ್ದು ಅಥವಾ ಆತನಿಗೆ ಜಾರಿ ಮಾಡತಕ್ಕದ್ದು.

**29. ನಿಧಿ.**- (1) ಮಂಡಲಿಯ ನಿಧಿ ಎಂದು ಕರೆಯಲಾಗುವ ಒಂದು ನಿಧಿ ಇರತಕ್ಕದ್ದು, ಇದನ್ನು ಮಂಡಲಿಯು ನಿರ್ವಹಿಸತಕ್ಕದ್ದು.

(2) ಈ ಮುಂದಿನವುಗಳು ಮಂಡಲಿಯ ನಿಧಿಯ ಒಂದು ಭಾಗವಾಗಿರತಕ್ಕದ್ದು ಅಥವಾ ಇವುಗಳನ್ನು ಅದಕ್ಕೆ ಸಂದಾಯಮಾಡತಕ್ಕದ್ದು, ಎಂದರೆ: -

(ಎ) ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಯಿಂದ ಬರುವ ಆದಾಯ ಅಥವಾ ಯಾವುದೇ ಸ್ವತ್ತಿನ ಉತ್ಪತ್ತಿ;

(ಬಿ) ಈ ಅಧಿನಿಯಮದ ಅಡಿಯಲ್ಲಿ ಮಂಡಲಿಗೆ ಸಂದಾಯ ಮಾಡಿದ ಅಥವಾ ಮಂಡಲಿಯಿಂದ ಅಥವಾ ಅದರ ಪರವಾಗಿ ವಿಧಿಸಿದ ಎಲ್ಲ ಶುಲ್ಕಗಳು ಮತ್ತು ಚಾರ್ಜುಗಳು ;

(ಸಿ) ರಾಜ್ಯ ಸರ್ಕಾರ ಅಥವಾ ಇತರ ಯಾವುದೇ ಪ್ರಾಧಿಕಾರ ನೀಡಿದ ಎಲ್ಲ ಅನುದಾನಗಳು ಮತ್ತು ವಂತಿಗೆಗಳು;

(ಡಿ) ಯಾರೇ ವ್ಯಕ್ತಿಯು ನೀಡಿದ ಎಲ್ಲ ವಂತಿಗೆಗಳು ಮತ್ತು ದೇಣಿಗೆಗಳು ;

(ಇ) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮಂಡಲಿಯು ಸಾಲ ರೂಪದಲ್ಲಿ ಪಡೆದ ಮೊತ್ತ; ಮತ್ತು

(ಎಫ್) ಇತರ ಯಾವುವೇ ಮೊತ್ತಗಳು.

**30. ಸಾಲ ಪಡೆಯಲು ಅಧಿಕಾರ.**- ಮಂಡಲಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಮೊಬಲಗನ್ನು ಸಾಲವಾಗಿ ಪಡೆದುಕೊಳ್ಳಬಹುದು.

**31. ನಿಧಿಯ ಬಳಕೆ.**- ಈ ಮುಂದಿನ ಎಲ್ಲ ಅಥವಾ ಯಾವುವೇ ಉದ್ದೇಶಗಳಿಗಾಗಿ ನಿಧಿಯನ್ನು ಬಳಸಬಹುದು, ಎಂದರೆ:-

(i) ಅರಮನೆಯ ನಿರ್ವಹಣೆ, ವ್ಯವಸ್ಥಾಪನೆ ಮತ್ತು ಆಡಳಿತ ;

(ii) ಅರಮನೆಯ ಆವರಣದಲ್ಲಿರುವ ಉದ್ಯಾನ ಮತ್ತು ತೋಟದ ನಿರ್ವಹಣೆ ಮತ್ತು ಅಭಿವೃದ್ಧಿ ;

(iii) ಅರಮನೆಯ ಆವರಣದಲ್ಲಿರುವ ಮರಗಳನ್ನು ಕಾಪಾಡಿಕೊಂಡು ಬರುವುದು ;

(iv) ಅರಮನೆಯ ಆವರಣದಲ್ಲಿ ವಸ್ತು ಸಂಗ್ರಹಾಲಯದ ಮತ್ತು ತೋಟಗಾರಿಕಾ ಉದ್ಯಾನದ ಅಭಿವೃದ್ಧಿ ;

(v) 26ನೇ ಪ್ರಕರಣದ ಅಡಿಯಲ್ಲಿ ನೇಮಕನಾದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ವೇತನಗಳ ಮತ್ತು ಭತ್ಯಗಳ ಸಂದಾಯ;

(vi) ನಿಯಮಿಸಬಹುದಾದಂಥ ಇತರ ಯಾವುದೇ ಉದ್ದೇಶ.

**32. ಲೆಕ್ಕಪರಿಶೋಧನೆ.**- (1) ರಾಜ್ಯ ಸರ್ಕಾರವು, ಪ್ರತಿವರ್ಷ, ಮಂಡಲಿಯ ಲೆಕ್ಕಪತ್ರಗಳನ್ನು ಪರಿಶೀಲಿಸಲು ಒಬ್ಬ ಲೆಕ್ಕ ಪರಿಶೋಧಕನನ್ನು ನೇಮಿಸತಕ್ಕದ್ದು ಮತ್ತು ಅವನಿಗೆ ಸಂಭಾವನೆಯನ್ನು ನಿಗದಿಪಡಿಸಿ ಅದನ್ನು ಮಂಡಲಿಯ

ನಿಧಿಯಿಂದ ಸಂದಾಯ ಮಾಡತಕ್ಕದ್ದು. ಲೆಕ್ಕಪರಿಶೋಧಕನು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಲೆಕ್ಕಪರಿಶೋಧಕನ ವರದಿಯ ಒಂದು ಪ್ರತಿಯನ್ನು ಮಂಡಲಿಗೆ ಕಳುಹಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ತೋರಿಸಿದ ಯಾವುವೇ ಲೋಪದೋಷಗಳನ್ನು ಅಥವಾ ಅಕ್ರಮತೆಗಳನ್ನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಸರಿಪಡಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಆ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

**33. ಬಜೆಟ್.**- (1) ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿವರ್ಷವೂ, ನಿಗದಿಪಡಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ನಮೂನೆಯಲ್ಲಿ ಮುಂಬರುವ ವರ್ಷಕ್ಕಾಗಿ ಬಜೆಟ್ಟನ್ನು ಮತ್ತು ಮಂಡಲಿಯ ಆದಾಯ ಮತ್ತು ವೆಚ್ಚಗಳ ಒಂದು ಅಂದಾಜನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಮಂಡಲಿಯ ಮುಂದೆ ಮಂಡಿಸತಕ್ಕದ್ದು. ಮಂಡಲಿಯು ಯಾವುದೇ ಮಾರ್ಪಾಟುಗಳಿಲ್ಲದೆ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಅದನ್ನು ಅನುಮೋದಿಸಬಹುದು.

(2) ಮಂಡಲಿಯು ಅಂಗೀಕರಿಸಿದ ಬಜೆಟ್ಟಿನ ಒಂದು ಪ್ರತಿಯನ್ನು ಯಾವ ವರ್ಷಕ್ಕೆ ಬಜೆಟ್ಟನ್ನು ತಯಾರಿಸಲಾಗಿದೆಯೋ ಆ ವರ್ಷದ ಹಿಂದಿನ ವರ್ಷ ಮುಕ್ತಾಯವಾಗುವುದಕ್ಕೆ ಎರಡು ತಿಂಗಳಿಗೆ ಕಡಿಮೆ ಇಲ್ಲದ ಅವಧಿಗೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**34. ಅಧಿನಿಯಮದ ಅಧ್ಯಾರೋಹಿ ಪ್ರಭಾವ.**- 14ನೇ ಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಉಳಿದು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಕಾನೂನಿನ ಆಧಾರದ ಮೇಲೆ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆಜ್ಞೆಯಲ್ಲಿ ಅಸಂಗತವಾಗಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**35. ಮಂಡಲಿಯು ಸ್ಥಿರೀಕರಿಸಿದ ಹೊರತು, ಕರಾರು ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು .**- 4ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡಿರುವ ಅರಮನೆಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ವರ್ಗಾವಣೆ ಪಡೆದವರು ಮಾಡಿಕೊಂಡ ಮತ್ತು ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಪ್ರತಿಯೊಂದು ಕರಾರು, ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವ ದಿನಾಂಕದಂದು ಮತ್ತು ಅಂದಿನಿಂದ, ಅಂಥ ಕರಾರನ್ನು ಆ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಮಂಡಲಿಯು ಲಿಖಿತದಲ್ಲಿ ಸ್ಥಿರೀಕರಿಸಿದ ಹೊರತು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಕರಾರನ್ನು ಸ್ಥಿರೀಕರಿಸುವಲ್ಲಿ ಮಂಡಲಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಬದಲಾವಣೆಗಳನ್ನು ಅಥವಾ ಮಾರ್ಪಾಡುಗಳನ್ನು ಅದರಲ್ಲಿ ಮಾಡಬಹುದು :

ಪರಂತು, ಮಂಡಲಿಯು,-

(ಎ) ಅಂಥ ಕರಾರು ಅನುಚಿತ ಹೊಣೆಯುಳ್ಳದ್ದಾಗಿದೆ ಅಥವಾ ಅದನ್ನು ದುರುದ್ದೇಶದಿಂದ ಮಾಡಿಕೊಳ್ಳಲಾಗಿದೆ ಅಥವಾ ಮಂಡಲಿಯ ಹಿತಾಸಕ್ತಿಗೆ ಹಾನಿಕರವಾಗಿದೆ ಎಂದು ಅದಕ್ಕೆ ಮನವರಿಕೆಯಾದ ಹೊರತು ; ಮತ್ತು

(ಬಿ) ಕರಾರಿನ ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮತ್ತು ಕರಾರನ್ನು ಸ್ಥಿರೀಕರಿಸಲು ಅಥವಾ ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡಲು ನಿರಾಕರಿಸಿರುವ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು,

-ಕರಾರು ಸ್ಥಿರೀಕರಿಸುವುದನ್ನು ಬಿಟ್ಟುಬಿಡತಕ್ಕದ್ದಲ್ಲ ಮತ್ತು ಕರಾರಿನಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡನ್ನು ಮಾಡತಕ್ಕದ್ದಲ್ಲ.

**36. ಸದ್ಭಾವನೆಯಿಂದ ಕೈಗೊಂಡ ಕಾರ್ಯಕ್ಕೆ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ರಾಜ್ಯ ಸರ್ಕಾರದ ಅಥವಾ ಮಂಡಲಿಯ ವಿರುದ್ಧ ಅಥವಾ ರಾಜ್ಯ ಸರ್ಕಾರದ ಅಥವಾ ಮಂಡಲಿಯ ಯಾರೇ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯಿಂದ ಅಧಿಕಾರ ಪಡೆದ ಇತರ ವ್ಯಕ್ತಿಯ ವಿರುದ್ಧ ಯಾವುವೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(2) ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಲಿಯ ವಿರುದ್ಧ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯಿಂದ ಅಧಿಕಾರ ಪಡೆದ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.

**37. ದಂಡನೆಗಳು.-** ಯಾರೇ ವ್ಯಕ್ತಿಯು,-

(ಎ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನತೆಯಲ್ಲಿ, ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿದ್ದು ಅಂಥ ಸ್ವತ್ತನ್ನು ರಾಜ್ಯ ಸರ್ಕಾರ ಅಥವಾ ಮಂಡಲಿಯಿಂದ ಅಕ್ರಮವಾಗಿ ತಡೆದಿಟ್ಟುಕೊಂಡರೆ ; ಅಥವಾ

(ಬಿ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ಸ್ವಾಧೀನಕ್ಕೆ ತೆಗೆದುಕೊಂಡರೆ ಅಥವಾ ಇಟ್ಟುಕೊಂಡರೆ ; ಅಥವಾ

(ಸಿ) ಅರಮನೆಗೆ ಸಂಬಂಧಪಟ್ಟ ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರಬಹುದಾದ ಯಾವುದೇ ದಸ್ತಾವೇಜು ಅಥವಾ ಆಸ್ತಿ ವಿವರಣಾ ಪಟ್ಟಿಯನ್ನು ಸಂದರ್ಭಾನುಸಾರವಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯು ನಿರ್ದಿಷ್ಟಪಡಿಸಿದ ಯಾವೊಬ್ಬ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳ ನಿಕಾಯದಿಂದ ಉದ್ದೇಶಪೂರ್ವಕವಾಗಿ ತಡೆದಿಟ್ಟುಕೊಂಡರೆ ಅಥವಾ ಒಪ್ಪಿಸಲು ತಪ್ಪಿದರೆ ; ಅಥವಾ

(ಡಿ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ಸಾಗಿಸಿದರೆ ಅಥವಾ ನಾಶಪಡಿಸಿದರೆ ; ಅಥವಾ

(ಇ) ಸುಳ್ಳೆಂದು ಅಥವಾ ಸಂಪೂರ್ಣವಾಗಿ ಸರಿಯಿಲ್ಲವೆಂದು ಅವನಿಗೆ ತಿಳಿದಿರುವ ಅಥವಾ ಹಾಗೆ ನಂಬಲು ಸೂಕ್ತ ಕಾರಣವಿರುವ ಯಾವುದೇ ಕ್ಲೇಮನ್ನು ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿದರೆ ;

- ಅವನು ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಧಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**38. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಮಾಡತಕ್ಕದ್ದು ಮತ್ತು ದಂಡಿಸತಕ್ಕದ್ದು :

ಪರಂತು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿರುವುದಾವುದೂ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದಡಿಯಲ್ಲಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತುಪಡಿಸಲಾದಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಈ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು

ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ** :- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**39. ಪರಿಷ್ಕರಣೆ** .- (1) ರಾಜ್ಯ ಸರ್ಕಾರವು ಯಾವುದೇ ವ್ಯವಹರಣೆಯ ಸಂಬಂಧದಲ್ಲಿ ಅಂಥ ವ್ಯವಹರಣೆಯ ಕ್ರಮಬದ್ಧತೆ ಅಥವಾ ಅದರಲ್ಲಿ ನೀಡಲಾದ ತೀರ್ಮಾನ ಅಥವಾ ಆದೇಶದ ಸೂಕ್ತತೆ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟುಮಾಡಿಕೊಳ್ಳುವುದಕ್ಕಾಗಿ ಮಂಡಲಿಯ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು.

(2) ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟು, ವಿಪರ್ಯಯ, ರದ್ದು ಅಥವಾ ಪುನರ್ ಪರಿಶೀಲನೆ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ ಅದು ತದನುಸಾರವಾಗಿ ಆದೇಶ ಹೊರಡಿಸಬಹುದು.

(3) ರಾಜ್ಯ ಸರ್ಕಾರವು (2)ನೇ ಉಪ ಪ್ರಕರಣದ ಅಡಿಯಲ್ಲಿ ಯಾರೇ ವ್ಯಕ್ತಿಗೆ ಬಾಧಕವಾಗುವ ಯಾವುದೇ ಆದೇಶವನ್ನು, ಆತನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಹೊರಡಿಸತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು (2)ನೇ ಉಪ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರಗಳ ಚಲಾವಣೆಯು ಇತ್ಯರ್ಥದಲ್ಲಿರುವಾಗ (1)ನೆಯ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ತೀರ್ಮಾನ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

**40. ಅಧಿಕಾರಗಳ ಪ್ರತ್ಯಾಯೋಜನೆ** .- (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು, 41 ಮತ್ತು 42ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿ ಅವರು ಚಲಾಯಿಸಬಹುದಾದಂಥ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

(2) ಯಾವುದೇ ಅಧಿಕಾರದ ಪ್ರತ್ಯಾಯೋಜನೆಯನ್ನು (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದಾಗಲೆಲ್ಲ, ಯಾವ ವ್ಯಕ್ತಿಗೆ ಅಂಥ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆಯೋ ಆ ವ್ಯಕ್ತಿಯು ಸರ್ಕಾರದ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸತಕ್ಕದ್ದು.

**41. ನಿಯಮ ರಚನಾಧಿಕಾರ**.- (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಈ ಮುಂದಿನ ಎಲ್ಲ ಅಥವಾ ಯಾವುವಾದರೂ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ :-

(ಎ) 5ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ನೀಡತಕ್ಕ ಸಮಯ ಮತ್ತು ವಿಧಾನ ;

(ಬಿ) 24ನೇ ಪ್ರಕರಣದ ಅಡಿಯಲ್ಲಿ ಮಂಡಲಿಯ ಸಭೆಗಳನ್ನು ಕರೆಯುವುದು ಮತ್ತು ಕಾರ್ಯಕಲಾಪಗಳ ಬಗ್ಗೆ ವ್ಯವಹರಿಸುವುದು ;

(ಸಿ) 27ನೇ ಪ್ರಕರಣದ ಅಡಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಯಾವ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸಬಹುದೋ ಮತ್ತು ತನ್ನ ಕರ್ತವ್ಯಗಳನ್ನು ನಿರ್ವಹಿಸಬಹುದೋ ಆ ನಿರ್ಬಂಧ ಮತ್ತು ಷರತ್ತುಗಳು ;

(ಡಿ) 30ನೇ ಪ್ರಕರಣದ ಅಡಿಯಲ್ಲಿ ಮಂಡಲಿಯು ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಬಹುದಾದಂಥ ಷರತ್ತುಗಳು ;

(ಇ) 31ನೇ ಪ್ರಕರಣದ ಅಡಿಯಲ್ಲಿ ನಿಧಿಯನ್ನು ಬಳಸಬಹುದಾದ ಇತರ ಉದ್ದೇಶಗಳು ;

(ಎಫ್) 33ನೇ ಪ್ರಕರಣದ ಅಡಿಯಲ್ಲಿ ಮಂಡಲಿಗಾಗಿ ಬಜೆಟ್ ಅಂದಾಜುಗಳನ್ನು ತಯಾರಿಸುವುದು ;

(ಜಿ) ಮಂಡಲಿಯ ಲೆಕ್ಕಪತ್ರಗಳು, ದಾಖಲೆಗಳು ಮತ್ತು ದಸ್ತಾವೇಜುಗಳ ನಿರ್ವಹಣೆ ಮತ್ತು ಅಭಿರಕ್ಷೆ ;

(ಹೆಚ್) ನಿಯಮಿಸುವುದು ಅಗತ್ಯವಾಗಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿ ಒಂದು ನಿಯಮವನ್ನು ಪೂರ್ವಾನ್ವಯ ಪರಿಣಾಮಕಾರಿಯಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ಆ ನಿಯಮವನ್ನು ರಚಿಸುವುದಕ್ಕೆ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಲಾಗುವ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(4) ಈ ಅಧಿನಿಯಮದ ಅಡಿ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಬಹುದಾದ ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಆ ಅಧಿವೇಶನಕ್ಕೆ ನಿಕಟ ತರುವಾಯದ ಅಧಿವೇಶನ ಅಥವಾ ಸದರಿ ನಿರಂತರ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**42. ತೊಂದರೆಗಳನ್ನು ನಿವಾರಿಸುವ ಅಧಿಕಾರ.**- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತೊಂದರೆಗಳನ್ನು ನಿವಾರಿಸಬಹುದು :

ಪರಂತು, ಗೊತ್ತುಪಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

**43. ಭೂ ಆರ್ಜನೆ ಅಧಿನಿಯಮ, 1894ರ ಅಡಿಯಲ್ಲಿನ ವ್ಯವಹರಣೆಗಳು ಕೊನೆಯಾಗುವುದು.**- ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಅರಮನೆಗೆ ಸಂಬಂಧಿಸಿದಂತೆ ಭೂ ಆರ್ಜನೆ ಅಧಿನಿಯಮ, 1894ರ ಯಾವುವೇ ಉಪಬಂಧಗಳ ಅಡಿಯಲ್ಲಿ ಹೊರಡಿಸಲಾದ ಎಲ್ಲ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಸೂಚನೆಗೆ ಅನುಸಾರವಾಗಿ ಯಾವುವೇ ವ್ಯವಹರಣೆಗಳನ್ನು ನಡೆಸಲಾಗಿದ್ದರೆ ಅವು ಕೊನೆಗೊಳ್ಳತಕ್ಕದ್ದು.

ಅನುಸೂಚಿ I

(ಪ್ರಕರಣ 2(2) ನೋಡಿ)

ಎಲ್ಲೆಗಳು

| ಮನೆ ಸಂಖ್ಯೆ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | ಭೂಮಿಯ ಅಂದಾಜು ವಿಸ್ತೀರ್ಣ |
|---|---|---|---|---|---|
| 1 | 2 | 3 | 4 | 5 | 6 |
| ಖಿಲ್ಲಾ ಮೊಹಲ್ಲಾದ ಮನೆ ಸಂಖ್ಯೆ 1 ರಿಂದ 17 | ಬೆಂಗಳೂರು ನೀಲಗಿರಿ ರಸ್ತೆ ರಸ್ತೆ ಓಲ್ಡ್ ಸ್ಟ್ಯಾಚ್ಯು ಸರ್ಕಲ್ ರಸ್ತೆ | ಹೊಸ ಸಯ್ಯಾಜಿ ರಾವ್ ರಸ್ತೆ | ಕರ್ಜನ್ ಪಾರ್ಕ್ ಮತ್ತು | ಪುರಂದರ ದಾಸ ರಸ್ತೆ | 72 ಎಕರೆ ಮತ್ತು 10 ಗುಂಟೆಗಳು |

## ಅನುಸೂಚಿ II

(10ನೇ ಪ್ರಕರಣ ನೋಡಿ)

| ಕ್ರಮ ಸಂಖ್ಯೆ | ಗೊತ್ತುಪಡಿಸಲಾದ ದಿನಾಂಕದಂದು ಯುವರಾಜ ಹಾಗೂ ಅವರ ಪತ್ನಿ ವಾಸವಾಗಿರುವ ಅರಮನೆ ಕಟ್ಟಡದ ಭಾಗದ ವಿವರಣೆ | ಚದರ ಮೀಟರುಗಳಲ್ಲಿ ಒಟ್ಟು ವಿಸ್ತೀರ್ಣ |
|---|---|---|
| 1 | 2 | 3 |
| 1. | (1) ಕನ್ನಡಿ ತೊಟ್ಟಿ<br>(2) ಕೃಷ್ಣಾ ತೊಟ್ಟಿ<br>(3) ಎಲೆ ತೊಟ್ಟಿ ; ಮತ್ತು<br>(4) ಕರಿಕಲ್ಲು ತೊಟ್ಟಿಯ ವಸ್ತು ಸಂಗ್ರಹಾಲಯದ ಭಾಗಗಳು<br>ಇವುಗಳನ್ನು ಒಳಗೊಂಡ ಅರಮನೆ ಕಟ್ಟಡದ ನೆಲ ಅಂತಸ್ತು ಮತ್ತು ಮೊದಲನೇ ಅಂತಸ್ತು. | 11,383 ಚ.ಮೀ.ಗಳು |

## ಅನುಸೂಚಿ III

(18, 19, 20, 21 ಮತ್ತು 22ನೇ ಪ್ರಕರಣಗಳನ್ನು ನೋಡಿ)

ಅರಮನೆಗೆ ಸಂಬಂಧಪಟ್ಟಂತೆ ಹೊಣೆಗಾರಿಕೆಗಳನ್ನು ತೀರಿಸುವ ಬಗ್ಗೆ ಆದ್ಯತಾ ಕ್ರಮ

### ಪ್ರವರ್ಗ I

ಈ ಮುಂದಿನವುಗಳು ಕೊಟ್ಟಿರುವ ಜಾಮೀನು ಸಹಿತ ಸಾಲದ ಅಸಲು ಮೊಬಲಗು, ಎಂದರೆ :-

(i) ಕೇಂದ್ರ ಸರ್ಕಾರ

(ii ) ರಾಜ್ಯ ಸರ್ಕಾರ

(iii) ಬ್ಯಾಂಕುಗಳು

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು

(v) ಇತರರು

### ಪ್ರವರ್ಗ II

ಈ ಮುಂದಿನವುಗಳು ಕೊಟ್ಟಿರುವ ಜಾಮೀನು ರಹಿತ ಸಾಲದ ಅಸಲು ಮೊಬಲಗು, ಎಂದರೆ :-

(i) ಕೇಂದ್ರ ಸರ್ಕಾರ

(ii) ರಾಜ್ಯ ಸರ್ಕಾರ

(iii) ಬ್ಯಾಂಕುಗಳು

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು

### ಪ್ರವರ್ಗ III

(ಎ) ಸರಕುಗಳ ಸರಬರಾಜು ಅಥವಾ ಸೇವೆಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಅಥವಾ ಇತರ ರಾಜ್ಯ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಸಂದಾಯವಾಗಬೇಕಾದ ಯಾವುವೇ ಬಾಕಿಗಳು.

(ಬಿ) **I** ಅಥವಾ **II**ನೇ ಪ್ರವರ್ಗದ ಅಡಿಯಲ್ಲಿ ಬರುವ ಸಾಲಗಳ ಮತ್ತು ಮುಂಗಡಗಳ ಮೇಲಿನ

ಬಡ್ಡಿಯ ಬಾಕಿಗಳು ಅಥವಾ ಇತರ ಬಾಕಿಗಳು.

**ಪ್ರವರ್ಗ IV**

(ಎ) ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ ಕೊಡಬೇಕಾಗಿರುವ ಕಂದಾಯ, ತೆರಿಗೆಗಳು, ಉಪಕರಗಳು, ದರಗಳು ಅಥವಾ ಇತರ ಬಾಕಿಗಳು ; ಮತ್ತು

(ಬಿ) ಇತರ ಯಾವುವೇ ಸಾಲಗಳು ಅಥವಾ ಬಾಕಿಗಳು.

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 30ನೇ ನವೆಂಬರ್ 1998 [ಡಿಪಿಎಆರ್ 48 ಪಿಎಸ್‌ಆರ್ 98]**

ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ರ (1998ರ ಕರ್ನಾಟಕ ಅಧಿನಿಯಮ ಸಂಖ್ಯೆ 32) 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ತಾರೀಖು 30ನೇ ನವೆಂಬರ್ 1998ರಂದು ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಎ. ರಾಮಸ್ವಾಮಿನಾಯಿಡು,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

* * * *

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 34**

(2013ರ ಮಾರ್ಚ್ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2013**

(2013ರ ಮಾರ್ಚ್ ಏಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1998ನ್ನು (1998ರ ಕರ್ನಾಟಕ ಅಧಿನಿಯಮ 32) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಮೈಸೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 24(1)ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.